ಸಂಪಾದಕರು :
ಎಂ.ಎಸ್. ವಿಕಾಸ್

ಭಾನುವಾರ, ಆಗಸ್ಟ್ 27, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 105 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ಸ್ವರತಿ, ಸುಳ್ಳು ಹೇಳುವ ಪ್ರಧಾನಿ ಮೋದಿ

### ಮೋದಿ ವಿರುದ್ಧ ಕಿಡಿಕಾರಿದ ಸಾಹಿತಿ, ಮಾಜಿ ಸಚಿವೆ ಬಿ.ಟಿ. ಲಲಿತಾನಾಯ್ಕ್




ದಾವಣಗೆರೆ, ಆ. 26 - ಸ್ವರತಿಯ, ತನ್ನ ಬಣ್ಣಿಸಿಕೊಳ್ಳುವ ಹಾಗೂ ಸುಳ್ಳು ಹೇಳುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಎಂದು ಮಾಜಿ ಸಚಿವೆ ಹಾಗೂ ಸಾಹಿತಿ ಬಿ.ಟಿ. ಲಲಿತಾ ನಾಯ್ಕ್ ಕಿಡಿ ಕಾರಿದ್ದಾರೆ.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ವತಿಯಿಂದ ನೀಡಲಾಗುವ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು. ನಗರದ ಕುವೆಂಪು ಕನ್ನಡ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಇತ್ತೀಚೆಗೆ ನಡೆದ ಚಂದ್ರಯಾನ - 3 ಯೋಜನೆ ಜನರ ಹಣದಿಂದ ಹಾಗೂ ವಿಜ್ಞಾನಿಗಳ ಪರಿಶ್ರಮದಿಂದ ನೆರವೇರಿದೆ. ಆದರೆ, ಪ್ರಧಾನ ಮಂತ್ರಿ ಈ ಸಂದರ್ಭದಲ್ಲಿ ನಾನೇ ಮಾಡಿದೆ ಎಂಬ ರೀತಿಯಲ್ಲಿ ಭಾಷಣ ಮಾಡಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇಂತಹ ಸಾಧನೆಯ ಸಂದರ್ಭದಲ್ಲಿ ಪ್ರಧಾನಿ ಉಪಸ್ಥಿತರಿದ್ದು ಹೆಮ್ಮೆ (2ನೇ ಪುಟಕ್ಕೆ)

## ಚಂದ್ರಯಾನ ತಾಣವೀಗ ಶಿವ ಶಕ್ತಿ

### ಆ.23 ರಾಷ್ಟ್ರೀಯ ಬಾಹ್ಯಾಕಾಶ ದಿನ : ಪ್ರಧಾನಿ ಮೋದಿ ಘೋಷಣೆ



ಬೆಂಗಳೂರು, ಆ. 26 - ಚಂದ್ರಯಾನ ಇಳಿದ ಸ್ಥಳವನ್ನು ಶಿವ ಶಕ್ತಿ ಪಾಯಿಂಟ್ ಎಂದು ಗುರುತಿಸಲಾಗುವುದು ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದಾರೆ.

ಚಂದ್ರಯಾನ - 3 ಯಶಸ್ಸು ಕಂಡ ಆಗಸ್ಟ್ 23 ಅನ್ನು ರಾಷ್ಟ್ರೀಯ ಬಾಹ್ಯಾಕಾಶ ದಿನವಾಗಿ ಆಚರಿಸಲಾಗುವುದು ಎಂದೂ ಪ್ರಧಾನಿ ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ ಬೆಂಗಳೂರಿಗೆ ಆಗಮಿಸಿ, ಇಸ್ರೋ ವಿಜ್ಞಾನಿಗಳ ಜೊತೆ ಸಂವಾದ ನಡೆಸಿದ ನಂತರ ಪ್ರಧಾನಿ ಈ ಘೋಷಣೆಗಳನ್ನು ಮಾಡಿದ್ದಾರೆ.

ಚಂದ್ರಯಾನ - 3ರ ಲ್ಯಾಂಡರ್ ವಿಕ್ರಮ್, ಚಂದ್ರನ ಮೇಲೆ ಇಳಿದ ಸ್ಥಳವನ್ನು ಶಿವ ಶಕ್ತಿ ಪಾಯಿಂಟ್ ಎಂದು ಗುರುತಿಸಲಾಗುವುದು ಎಂದು ಮೋದಿ ತಿಳಿಸಿದರು.

ಚಂದ್ರಯಾನದ ಯಶಸ್ಸು ಭಾರತದ ಬಾಹ್ಯಾಕಾಶ ಯೋಜನೆಯಲ್ಲಿ ಅಸಾಧಾರಣ ಕ್ಷಣವಾಗಿದೆ ಎಂದು ಹೇಳಿರುವ ಪ್ರಧಾನಿ, 2019ರಲ್ಲಿ ಚಂದ್ರಯಾನ - 2 ಪತನಗೊಂಡ ಜಾಗವನ್ನು ತಿರಂಗ ಪಾಯಿಂಟ್ ಎಂದು ಗುರುತಿಸ (2ನೇ ಪುಟಕ್ಕೆ)

## ಬಿಜೆಪಿ ಅವಧಿಯ ಭ್ರಷ್ಟಾಚಾರಗಳ ತನಿಖೆಗೆ ಎರಡು ಆಯೋಗ ರಚನೆ

**ಕೊರೊನಾ, ಶೇ.40 ಪರ್ಸೆಂಟೇಜ್ ಆರೋಪಗಳಿಗೆ ಪ್ರತ್ಯೇಕ ಆಯೋಗ ರಚನೆ**

ಬೆಂಗಳೂರು, ಆ. 26 – ಕೊರೊನಾ ಮಹಾಮಾರಿಯ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ತನಿಖೆಗೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹಾ ನೇತೃತ್ವದಲ್ಲಿ ವಿಚಾರಣಾ ಆಯೋಗ ರಚಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ಈ ಎರಡೂ ಇಲಾಖೆಗಳು ಕೊರೊನಾ ನಿರ್ವಹಣೆಗಾಗಿ ಔಷಧಿ ಹಾಗೂ ಉಪಕರಣಗಳ ಖರೀದಿಸಿರುವುದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು (ಪಿಎಸಿ) ನೀಡಿರುವ ವರದಿಯಲ್ಲಿ ಗಂಭೀರವಾದ ಆರೋಪಗಳ ಬಗ್ಗೆ ವಿವರಿಸಲಾಗಿದೆ. ಹೀಗಾಗಿ, ಈ ಪ್ರಕರಣದ ತನಿಖೆ ನಡೆಸಲಾಗುವುದು ಎಂದು ರಾಜ್ಯ ಸರ್ಕಾರ ತಿಳಿಸಿದೆ.

3 ತಿಂಗಳ ಒಳಗೆ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು. ಈ ನಿಟ್ಟಿನಲ್ಲಿ ಸಮಗ್ರ ಮಾಹಿತಿ, ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳು ಸಲ್ಲಿಸಬೇಕು ಎಂದು ಗಡುವು ನೀಡಲಾಗಿದೆ.

ಇದೇ ವೇಳೆ, ಗುತ್ತಿಗೆಗಳಲ್ಲಿ ಶೇ.40ರ ಭ್ರಷ್ಟಾಚಾರ ನಡೆದ ಆರೋಪಗಳ ಬಗ್ಗೆ ಸಮಿತಿಯ ಬದಲು ಆಯೋಗದ ಮೂಲಕ ತನಿಖೆ ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರ ಅಧ್ಯಕ್ಷತೆಯಲ್ಲಿ ತನಿಖಾ ಸಮಿತಿ ರಚಿಸಲಾಗಿತ್ತು. ಅದನ್ನು ಈಗ ಆಯೋಗವಾಗಿ ಬದಲಿಸಲಾಗಿದೆ. (4ನೇ ಪುಟಕ್ಕೆ)

## ವಿದೇಶ ಪ್ರವಾಸ : ತರಳಬಾಳು ಶ್ರೀಗಳಿಗೆ ಸ್ವಾಗತ



ಸಿರಿಗೆರೆ, ಆ. 26- ಗಣಕ ವಚನ ಸಂಪುಟ ಮೊಬೈಲ್ ಆಪ್ ಅನ್ನು ಮತ್ತಷ್ಟು ಸಮಗ್ರಗೊಳಿಸಲು ತಮ್ಮ ವಿದೇಶಿ ಪ್ರವಾಸ ಸಂದರ್ಭದಲ್ಲಿ, ಅನಿವಾಸಿ ಭಾರತೀಯ ಕಂಪ್ಯೂಟರ್ ವಿಜ್ಞಾನಿಗಳೊಡನೆ ಸಮಾಲೋಚಿಸಿದ್ದಾಗಿ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಒಂದು ತಿಂಗಳ ವಿದೇಶ ಪ್ರವಾಸ ಪೂರೈಸಿ ಶನಿವಾರ ಸಿರಿಗೆರೆಗೆ ಹಿಂದಿರುಗಿದ ಸಂದರ್ಭದಲ್ಲಿ, ಬೃಹನ್ಮಠದ ಐಕ್ಯಮಂಟಪದಲ್ಲಿ ತಮ್ಮನ್ನು ಸ್ವಾಗತಿಸಿದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಸಾರ್ವಜನಿಕರನ್ನುದ್ದೇಶಿಸಿ ಶ್ರೀಗಳು ಮಾತನಾಡಿದರು.

ವಿದೇಶಗಳಲ್ಲಿ ತಾವು ಮಾಡಿದ ಶರಣ ಸಾಹಿತ್ಯ ಪ್ರಚಾರ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ ಸ್ವಾಮೀಜಿ ವಿವರಿಸಿದರು. ಬೆಂಗಳೂರು ತರಳಬಾಳು ಕೇಂದ್ರದಲ್ಲಿ ಚಂದ್ರಯಾನ 3ರ ಇಸ್ರೋ ವಿಜ್ಞಾನಿಗಳ ತಂಡದಲ್ಲಿದ್ದ, ಶ್ರೀ ತರಳಬಾಳು ಜಗದ್ಗುರು ವಿದ್ಯಾ (2ನೇ ಪುಟಕ್ಕೆ)

ಭಾರಿ... ಜನದಟ್ಟಣೆಯಿಂದ ಮುನ್ನುಗ್ಗುತ್ತಿರುವ ಶ್ರಾವಣ ಸಂಭ್ರಮ

ಡಬಲ್ ಡಿಸ್ಕೌಂಟ್

ದಿನಾಂಕ: 6-9-2023 ರವರೆಗೆ ಮುಂದುವರೆಯುವುದು

"ಬನ್ನಿ ನಮ್ಮ ಗ್ರಾಹಕರೇ ಈ ಲಾಭವನ್ನು ಪಡೆಯಿರಿ"

ಬಿ.ಎಸ್.ಚನ್ನಬಸಪ್ಪ & ಸನ್ಸ್

ದಾವಣಗೆರೆಯ ನಮ್ಮ ಎಲ್ಲಾ BSC ಬ್ರಾಂಚ್‌ಗಳಲ್ಲಿ

## ಅಮೆರಿಕಾದಲ್ಲೇ ಮೃತ ಕುಟುಂಬದ ಅಂತ್ಯಕ್ರಿಯೆ

ದಾವಣಗೆರೆ, ಆ.26- ಅಮೆರಿಕಾದ ಮೇರಿ ಲ್ಯಾಂಡ್ ರಾಜ್ಯದ ಬಾಲ್ತಿಮೇರ್ ನಲ್ಲಿ ಮೃತಪಟ್ಟ ದಾವಣಗೆರೆ ಮೂಲದ ಕುಟುಂಬದ ಮಗು ಸೇರಿ ದಂಪತಿಯ ಮೃತದೇಹಗಳ ಅಂತ್ಯಕ್ರಿಯೆಯನ್ನು ಅಲ್ಲಿಯೇ ನೆರವೇರಿಸಲಾಗುತ್ತಿದ್ದು, ವೀರಶೈವ ಲಿಂಗಾಯತ ಸಂಪ್ರದಾಯದ ಪ್ರಕಾರ ಅಂತಿಮ ವಿಧಿ ವಿಧಾನಗಳು ನೆರವೇರಲಿವೆ.

ಕಳೆದ ಆಗಸ್ಟ್ 15ರಂದು ಅಮೆರಿಕಾದ ಮೇರಿ ಲ್ಯಾಂಡ್ ರಾಜ್ಯದ ಬಾಲ್ತಿಮೇರ್ ನಲ್ಲಿ ಜಗಳೂರು ತಾಲ್ಲೂಕಿನ ಹೊನ್ನಾಳ ಗ್ರಾಮದ ಯೋಗೇಶ್ ಅವರು ಪತ್ನಿ ಪ್ರತಿಭಾ ಹೊನ್ನಾಳ ಹಾಗೂ ಪುತ್ರ (2ನೇ ಪುಟಕ್ಕೆ)

## ಸೆ.2ರಂದು ಆದಿತ್ಯ ಉಡಾವಣೆ

ಬೆಂಗಳೂರು, ಆ. 26 - ಚಂದ್ರಯಾನದ ಯಶಸ್ಸಿನ ನಂತರ ಭಾರತೀಯ ಬಾಹ್ಯಾಕಾಶ ಸಂಸ್ಥೆ ಸೂರ್ಯಯಾನದ ಕಡೆ ಗಮನ ಹರಿಸಿದೆ. ಸೆಪ್ಟೆಂಬರ್ 2 ರಂದು ಗಗನನೌಕೆ ಉಡಾವಣೆಯಾಗುವ ಸಾಧ್ಯತೆ ಇದೆ.

ಆದಿತ್ಯ - ಎಲ್1 ಗಗನನೌಕೆಯನ್ನು ಸೂರ್ಯನ ಹೊರ ವಲಯದ ಅಧ್ಯಯನಕ್ಕಾಗಿ ರೂಪಿಸಲಾಗಿದೆ. ಭೂಮಿಯಿಂದ 1.5 ದಶಲಕ್ಷ ಕಿ.ಮೀ. ದೂರದಲ್ಲಿ ಗಗನನೌಕೆಯು ಸೌರ ಅಲೆಗಳ ಅಧ್ಯಯನ ನಡೆಸಲಿದೆ.

ಆದಿತ್ಯ ಗಗನನೌಕೆಯಲ್ಲಿ ಏಳು ಉಪಕರಣಗಳಿವೆ. ಇದನ್ನು ದೇಶೀಯವಾಗಿ ರೂಪಿಸಲಾಗಿದೆ.

ಹೃತ್ಪೂರ್ವಕ ಅಭಿನಂದನೆಗಳು



ದಾವಣಗೆರೆ ಜಿಲ್ಲಾ ವರದಿಗಾರರ ಕೂಟದಿಂದ ಕೊಡಮಾಡುವ 'ಜಿಲ್ಲಾ ಮಾಧ್ಯಮ' ಪ್ರಶಸ್ತಿಗೆ ಭಾಜನರಾದ ದಾವಣಗೆರೆ ಕನ್ನಡಿಗ ದಿನಪತ್ರಿಕೆ ಸಂಪಾದಕರೂ, ಸ್ನೇಹಜೀವಿ

ಶ್ರೀ ಆರ್. ರವಿ
ಅವರಿಗೆ
ಹೃತ್ಪೂರ್ವಕ ಅಭಿನಂದನೆಗಳು.



ಶುಭ ಕೋರುವವರು :
ವಿಶ್ವನಾಥ್ ಹೆಚ್. ಎಂ. ಮತ್ತು ಗೆಳೆಯರ ಬಳಗ, ದಾವಣಗೆರೆ.

ತೃತೀಯ ವರ್ಷದ ಪುಣ್ಯ ಸ್ಮರಣೆ




ದಿ॥ ಕೆ.ಆರ್. ಮಂಜುನಾಥ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ನಿಮ್ಮ ನೆನಪು ನಮಗೆ ಸದಾ ಹಚ್ಚ ಹಸಿರು, ಸ್ಫೂರ್ತಿದಾಯಕ, ನಿಮ್ಮ ಪ್ರೀತಿ, ಆರೈಕೆ ನೆನಪುಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...

ಪತ್ನಿ : ಶ್ರೀಮತಿ ಸುಪ್ರಭಾ ಮಂಜುನಾಥ್, ಮಗ : ಕೆ.ಎಂ. ಗಗನ್
ತಮ್ಮ : ಶ್ರೀ ಕೆ.ಆರ್. ವಿಜಯಕುಮಾರ್, ಶ್ರೀಮತಿ ಲೀಲಾ
ಮಗ : ಕೆ.ವಿ. ಸಂಕೇತ್, ದಾವಣಗೆರೆ.
ಶ್ರೀ ಜಿ. ಎಸ್. ನಾಗರಾಜ್, ಶ್ರೀಮತಿ ಇಂದಿರ ಮತ್ತು ಮಕ್ಕಳು,
ಅಳಿಯಂದಿರು, ಮೊಮ್ಮಕ್ಕಳು, ದಾವಣಗೆರೆ.
ಕರಿಯಪ್ಪರ ವಂಶಸ್ಥರು, ಶಿರಮಗೊಂಡನಹಳ್ಳಿ.
ನಾಡಿಗರ ವಂಶಸ್ಥರು, ಬೆಳವನೂರು. ಹಾಗೂ ಬಂಧು-ಮಿತ್ರರು.

ದೇವರಬೆಳಕೆರೆ ಅಂಗಡಿ ಪರಮೇಶ್ವರಪ್ಪ ನಿಧನ



ದಾವಣಗೆರೆ ಜಿಲ್ಲೆ, ಹರಿಹರ ತಾ॥ ದೇವರಬೆಳಕೆರೆ ಗ್ರಾಮದ
ಅಂಗಡಿ ಗಣೇಶ್
ಬಿಲ್ಡರ್ಸ್ & ಲ್ಯಾಂಡ್ ಡೆವಲಪರ್ಸ್ ಇವರ ತಂದೆಯವರಾದ

ಅಂಗಡಿ ಪರಮೇಶ್ವರಪ್ಪ
(ಕೋಲ್ಕುಂಟೆ)

ಮಾಜಿ ಕಾರ್ಯದರ್ಶಿಗಳು ಹಾಗೂ
ಹಾಲಿ ನಿರ್ದೇಶಕರು ಶ್ರೀ ಮೈಲಾರಲಿಂಗೇಶ್ವರ
ವಿದ್ಯಾಸಂಸ್ಥೆ, ದೇವರಬೆಳಕೆರೆ.

ಇವರು ದಿನಾಂಕ : 26.08.2023 ರಂದು ಶನಿವಾರ
ಬೆಳಗ್ಗೆ 11.30ಕ್ಕೆ ದೈವಾಧೀನರಾಗಿದ್ದಾರೆ.
ಪ್ರಯುಕ್ತ ಮೃತರ ಅಂತ್ಯಕ್ರಿಯೆಯನ್ನು ಮೃತರ
ಸ್ವ-ಗ್ರಾಮ ದೇವರಬೆಳಕೆರೆಯಲ್ಲಿ
ದಿನಾಂಕ : 27.08.2023ರ ಮಧ್ಯಾಹ್ನ 12. ಗಂಟೆಗೆ
ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :

ಮಕ್ಕಳಾದ : ಎ.ಪಿ. ಜಯಪ್ರಕಾಶ್, ಎ.ಪಿ. ಕಿರಣ್ ಕುಮಾರ್, ಎ.ಪಿ. ಗಣೇಶ್
ಶ್ರೀಮತಿ ವೀಣಾ ವೀರನಗೌಡ ದಳವಾಯಿ, ಮೊಮ್ಮಕ್ಕಳು, ಸಹೋದರ, ಸಹೋದರಿಯರು,
ಅಳಿಯಂದಿರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗ.
ಫೋ. : 87227 14217, 98806 57230

# ಹರಿಹರ ಮರ್ಚೆಂಟ್ ಸೌಹಾರ್ದ ಸಹಕಾರಿಗೆ 12.32 ಲಕ್ಷ ರೂ. ಲಾಭ



ಹರಿಹರ, ಆ. 26 - ಹರಿಹರ ಮರ್ಚೆಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತವು 12.32 ಲಕ್ಷ ರೂ. ಲಾಭ ಗಳಿಸಿದ್ದು, ಷೇರುದಾರರಿಗೆ ಶೇ.7ರ ಡೆವಿಡೆಂಟ್ ನೀಡುತ್ತಿದೆ ಎಂದು ಸಂಘದ ನಿಯಮಿತ ಅಧ್ಯಕ್ಷ ಹೆಚ್.ಎಂ. ನಾಗರಾಜ್ ಹೇಳಿದರು.

ನಗರದ ರಚನಾ ಕ್ರೀಡಾ ಟ್ರಸ್ಟ್ ನಲ್ಲಿ ನಡೆದ ಹರಿಹರ ಮರ್ಚೆಂಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತದ 9 ನೇ ವರ್ಷದ ವಾರ್ಷಿಕ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹರಿಹರ ಮರ್ಚೆಂಟ್ ಸೌಹಾರ್ದ ಸಹಕಾರಿ ಸಂಘವು ಚಿಕ್ಕದಾಗಿ ಆರಂಭಗೊಂಡು ಇಂದಿಗೆ 8 ವರ್ಷ ಪೂರೈಸಿ 9ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಆಚರಿಸುತ್ತಿದೆ. 761 ಷೇರುದಾರರನ್ನು ಹೊಂದಿ, 23 ಲಕ್ಷದ 38 ಸಾವಿರ ರೂಪಾಯಿ ಷೇರುದಾರರ ಬಂಡವಾಳದೊಂದಿಗೆ, 2 ಕೋಟಿ 25 ಲಕ್ಷದ 75 ಸಾವಿರ ರೂಪಾಯಿ ಠೇವಣಿಗಳನ್ನು ಹೊಂದಿದೆ ಎಂದರು.

ಇದು, ಕಳೆದ ಸಾಲಿಗಿಂತ, 8 ಲಕ್ಷದ 32 ಸಾವಿರ ರೂಪಾಯಿ ಹೆಚ್ಚು ಆಗಿರುತ್ತದೆ. ಜಾಮೀನು ಸಾಲ, ಭದ್ರತಾ ಸಾಲ, ವಾಹನಗಳ ಸಾಲ ಹಾಗೂ ಠೇವಣಿಗಳ ಆಧಾರಿತ ಸಾಲ ಸೇರಿದಂತೆ ಈ ಸಾಲಿನಲ್ಲಿ 2 ಕೋಟಿ 20 ಲಕ್ಷದ 16 ಸಾವಿರ ರೂಪಾಯಿ ಸಾಲವನ್ನು ನೀಡಲಾಗಿದೆ ಎಂದರು.

ಈ ವೇಳೆ ಸಹಕಾರಿ ಸಂಘಕ್ಕೆ ಸಹಕಾರ ನೀಡಿರುವ ಬೊಂಗಾಳೆ ಕಾಳಪ್ಪ, ರಾಮಚಂದ್ರ ಶೆಟ್ಟಿ, ಪರುಶುರಾಮ್ ಬದಿ, ನಾಗರಾಜ್ ಪಿ, ಜಿ. ಕೊಟ್ರಪ್ಪ, ಮೋಹನ್ ರಾವ್, ಮಾರುತಿ ರಾವ್, ಮಹೇಶ್ವರಪ್ಪ ಬೆಣ್ಣೆ, ಸುರೇಶ್ ಜಿ.ಕೆ. ಜಾರ್ಜ್ ( ಬಾಬಣ್ಣ) ಮಾಜಿ ಕಾರ್ಯದರ್ಶಿ ಶಿವನಗೌಡ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಡಾ ಪ್ರವೀಣ್ ಹೆಗಡೆ, ನಿರ್ದೇಶಕರಾದ ಜಿ.ಕೆ. ವೀರಣ್ಣ, ಲೆಕ್ಕ ಪರಿಶೋಧಕರು ಹಾಗೂ ತೆರಿಗೆ ಸಲಹೆಗಾರರಾದ ಹೆಚ್.ಎಸ್. ಮಂಜುನಾಥ್, ಜಿ ನಂಜಪ್ಪ, ಹೆಚ್.ವಿ. ಸುಜಯ್, ಮಯೂರ್ ಹೆಚ್.ಎನ್. ರಾಘವೇಂದ್ರ ಬೊಂಗಾಳೆ, ಡಾ ಸೀಮಾ ಎನ್. ವಿ.ಟಿ.ನಾಗರಾಜ್, ಸುನಿತಾ ಪಿ.ಬದ್ದಿ, ನಾಗರತ್ನ ಜಿ.ಕೆ., ಮಂಜುಳಾ ಪ್ರಸಾದ್, ಸಿಬ್ಬಂದಿ ವರ್ಗದವರಾದ ಪ್ರಭಾರಿ ವ್ಯವಸ್ಥಾಪಕ ರುದ್ರಯ್ಯ ಕಳ್ಳಿಮಠ, ಬೀರಪ್ಪ ಎಸ್ ಕಮತರ, ಎ.ವಿ. ಶ್ರೀನಾಥ್, ಜಯಲಕ್ಷ್ಮಿ ವಿ.ಎಸ್. ಪಿಗ್ಮಿ ಸಂಗ್ರಾಹಕರಾದ, ಕರಿಬಸಪ್ಪ ಪಿ.ಎಸ್. ವೀರೇಶ್ ಎನ್.ಎಸ್. ಪರಶುರಾಮ್ ಪವರ್, ಎಸ್.ಬಿ. ಕುಂಚೂರು, ರಾಘವೇಂದ್ರ ಇತರರು ಉಪಸ್ಥಿತರಿದ್ದರು.

# ವಿದೇಶ ಪ್ರವಾಸ : ತರಳಬಾಳು ಶ್ರೀಗಳಿಗೆ ಸ್ವಾಗತ



(1ನೇ ಪುಟದಿಂದ) ಸಂಸ್ಥೆಯ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸುವುದಾಗಿ ತಿಳಿಸಿದ ಶ್ರೀಗಳು, ಅವರಂತೆ ಸಾಧನೆ ಮಾಡಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್.ಬಿ.ರಂಗನಾಥ್, ಆಡಳಿತಾಧಿಕಾರಿ ಡಾ. ಎಚ್.ವಿ.ವಾಮದೇವಪ್ಪ, ಅಣ್ಣನ ಬಳಗದ ಅಧ್ಯಕ್ಷ ಸಿ.ಎಸ್.ಮರುಳಸಿದ್ದಯ್ಯ, ತೀರ್ಥಪ್ಪ, ಮಂಜುನಾಥ್, ನಾಗರಾಜ್, ದೇವರಾಜ್, ಬಸವರಾಜಯ್ಯ ಮತ್ತಿತರರು ಈ ಸಂದರ್ಭದಲ್ಲಿದ್ದರು.

**ಗಣಕ ವಚನ ಸಂಪುಟ ಮೊಬೈಲ್ ಆಪ್ ಅನ್ನು ಮತ್ತಷ್ಟು ಸಮಗ್ರಗೊಳಿಸಲು ಅನಿವಾಸಿ ಭಾರತೀಯ ಕಂಪ್ಯೂಟರ್ ವಿಜ್ಞಾನಿಗಳೊಡನೆ ಸಮಾಲೋಚಿಸಿದ್ದಾಗಿ ಹೇಳಿದ ತರಳಬಾಳು ಶ್ರೀ**

# ಅಮೆರಿಕಾದಲ್ಲೇ ಮೃತ ಕುಟುಂಬದ ಅಂತ್ಯಕ್ರಿಯೆ

(1ನೇ ಪುಟದಿಂದ) ಯಶ್ ಹೊನ್ನಾಳನಿಗೆ ಶೂಟ್ ಮಾಡಿ ಬಳಿಕ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದರು. ಆತ್ಮಹತ್ಯೆಗೆ ಮುನ್ನ ಡೆತ್ ನೋಟ್ ಬರೆದಿಟ್ಟಿದ್ದು, ಅಲ್ಲಿನ ಪೊಲೀಸರು ಬಹಿರಂಗಪಡಿಸಿಲ್ಲ.

ಯೋಗೇಶ್ ಹೊನ್ನಾಳ ತಾಯಿ ಶೋಭಾ, ಸಹೋದರ ಹಾಗೂ ಪ್ರತಿಭಾ ಯೋಗೇಶ್ ಹೊನ್ನಾಳ ತಾಯಿ ಹಾಗೂ ಸಹೋದರ ಅಮೆರಿಕಾ ತಲುಪಿದ್ದಾರೆ. ಇವರ ಸಮ್ಮುಖದಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಲಿವೆ.

ಘಟನೆ ನಡೆದು ಎರಡರಿಂದ ಮೂರು ದಿನಗಳ ಬಳಿಕ ಈ ವಿಚಾರ ಗೊತ್ತಾಗಿತ್ತು. ಅಷ್ಟೊತ್ತಿಗೆ ಮೃತದೇಹಗಳು ಕೊಳೆತು ಹೋಗಿದ್ದವು. ಇನ್ನು ಘಟನೆ ನಡೆದ ಬಳಿಕ ಮೃತದೇಹಗಳನ್ನು ಕೋಲ್ಡ್ ಸ್ಟೋರೇಜ್ ನಲ್ಲಿಟ್ಟಿದ್ದರೂ ಮೃತದೇಹಗಳು ಪೂರ್ತಿಯಾಗಿ ಕೊಳೆತು ಹೋಗಿವೆ. ಹಾಗಾಗಿ ಮೃತದೇಹಗಳನ್ನು ಕಳುಹಿಸಿಕೊಡಲು ಕಷ್ಟವಾಗುತ್ತದೆ ಎಂದು ಬಾಲ್ಟಿಮೋರ್ ಕೌಂಟಿ ಪೊಲೀಸರು ಹಾಗೂ ಅಲ್ಲಿನ ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

# ಹೊನ್ನಾಳಿ ತಾಲ್ಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಸರ್ಕಾರಕ್ಕೆ ಆಗ್ರಹ

ಹೊನ್ನಾಳಿ, ಆ.26- ಈ ಬಾರಿ ಮುಂಗಾರು ಮಳೆ ಸಂಪೂರ್ಣ ಕೈ ಕೊಟ್ಟು ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕಿನಲ್ಲಿ ಅನಾವೃಷ್ಟಿಯಿಂದ ಬೆಳೆ ಸಂಪೂರ್ಣ ಹಾಳಾಗಿದ್ದು, ಬರಪೀಡಿತ ಎಂದು ಘೋಷಿಸಲು ಸರ್ಕಾರಕ್ಕೆ ಮನವಿ ಪತ್ರವನ್ನು ಸಲ್ಲಿಸಿ ಒತ್ತಾಯಪಡಿಸಲಾಗಿದೆ ಎಂದು ಶಾಸಕ ಡಿ.ಜಿ.ಶಾಂತನಗೌಡ ತಿಳಿಸಿದ್ದಾರೆ.



ಅವರು ಮಳೆ ಕೊರತೆಯಿಂದಾಗಿ ಅವಳಿ ತಾಲ್ಲೂಕಿನಲ್ಲಿ ಬಿತ್ತಿದ ಬೆಳೆ ಸಂಪೂರ್ಣ ಒಣಗಿ ಹೋಗಿ ರೈತರ ಪರಿಸ್ಥಿತಿ ತೀವ್ರ ಆಂತಕ ಪಡುವಂತಾಗಿದ್ದು, ಈ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳೊಂದಿಗೆ ಕತ್ತಿಗೆ, ಮಾದೇನಹಳ್ಳಿ, ಹತ್ತೂರು, ಸೋಮನಮಲ್ಲಾಪುರ ಸೇರಿದಂತೆ ಹಲವಾರು ಗ್ರಾಮಗಳ ಜಮೀನುಗಳಿಗೆ ಖುದ್ದಾಗಿ ಭೇಟಿ ನೀಡಿ ಬೆಳೆ ಪರಿಸ್ಥಿತಿಗಳ ಅವಲೋಕನ ಮಾಡಿ ಮಾತನಾಡಿದರು.

ತುಂಗಾ ಮೇಲ್ದಂಡೆ, ತುಂಗಾ, ಭದ್ರಾ ಚಾನಲ್ ನೀರು ಅಚ್ಚುಕಟ್ಟು ಪ್ರದೇಶದ ರೈತರಿಗೆ ತಲುಪುತ್ತಿಲ್ಲ. ಕಾರಣ ಈ ಬಾರಿ ಅವಳಿ ಡ್ಯಾಂನಲ್ಲೇ ನೀರಿನ ಕೊರತೆ ಒಂದು ಕಾರಣವಾದರೆ, ಈ ಪ್ರದೇಶಗಳಲ್ಲಿ ಬರುವ ಮಳೆಯಾಶ್ರಿತ ಜಮೀನುಗಳ ರೈತರು ಪಂಪ್‌ಸೆಟ್ ಮೂಲಕ ತಮ್ಮ ಜಮೀನುಗಳಿಗೆ ನೀರು ಹೊಡೆದುಕೊಳ್ಳುತ್ತಿರುವ ಕಾರಣ ತುಂಗಾ ಮೇಲ್ದಂಡೆ ತುಂಗಾ ಮತ್ತು ಭದ್ರಾ ಚಾನಲ್‌ಗಳ ಅಚ್ಚುಕಟ್ಟು ಪ್ರದೇಶದ ರೈತರಿಗೆ ನೀರು ಹರಿದು ಬರದೇ ಅವರೂ ಕೂಡ ಸಂಕಷ್ಟದಲ್ಲಿದ್ದಾರೆ. ಒಟ್ಟಾರೆಯಾಗಿ ಈ ಬಾರಿ ಎಲ್ಲಾ ಜಮೀನುಗಳ ರೈತರ ಬೆಳೆಗಳಿಗೆ ಸಮರ್ಪಕ ನೀರಿನ ವ್ಯವಸ್ಥೆ ಇಲ್ಲದೆ ತೀವ್ರ ಸಂಕಷ್ಟದಲ್ಲಿದ್ದಾರೆ ಎಂದ ಅವರು, ಮಳೆ ಕೊರತೆಯಿಂದ ಅಂತರ್ಜಲ ಕೊರತೆ ಕೂಡ ಎದುರಾಗಲಿದೆ ಎಂದರು.

ಒಟ್ಟಾರೆಯಾಗಿ ಈ ಬಾರಿ ರೈತರಿಗೆ ಅಗ್ನಿ ಪರೀಕ್ಷೆಯಾಗಿದ್ದು, ಅವಳಿ ತಾಲ್ಲೂಕಿನ ತೀವ್ರ ಬರ ಪರಿಸ್ಥಿತಿ ಬಗ್ಗೆ ಸಮಗ್ರ ಮಾಹಿತಿಯನ್ನು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಂದಾಯ ಸಚಿವ ಕೃಷ್ಣಭೈರೇಗೌಡ ಅವರಿಗೆ ಅವಳಿ ತಾಲ್ಲೂಕಗಳು ಬರ ಪರಿಸ್ಥಿತಿ, ರೈತರ ಬೆಳೆ ಹಾನಿ ಬಗ್ಗೆ ಸಮಗ್ರ ಮಾಹಿತಿಯ ಮನವಿ ಪತ್ರ ಸಲ್ಲಿಸಿ ಕೂಡಲೇ ಅವಳಿ ತಾಲ್ಲೂಕುಗಳನ್ನು ಪ್ರಥಮ ಪಟ್ಟಿಯಲ್ಲಿಯೇ ಬರಪೀಡಿತ ತಾಲ್ಲೂಕುಗಳು ಎಂದು ಘೋಷಿಸಿ ಸಂಕಷ್ಟ ಕ್ಕೀಡಾಗಿರುವ ರೈತರ ಸಹಾಯಕ್ಕೆ ಸರ್ಕಾರ ಮುಂದಾಗಬೇಕೆಂದು ಒತ್ತಾಯಪಡಿಸಿದೆ ಎಂದು ಶಾಸಕರು ಹೇಳಿದರು.

ಮಳೆ ಅಭಾವದಿಂದಾಗಿ ವಿದ್ಯುತ್ ಉತ್ಪಾದನೆಯಲ್ಲು ಕೂಡ ವ್ಯತ್ಯಾಸ ಕಂಡುಬಂದಿದ್ದು, ಈಗಾಗಲೇ ಸರ್ಕಾರ ಪ್ರಥಮ ಹಂತದಲ್ಲಿ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ಹರಿಹರ, ಜಗಳೂರು ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಪಟ್ಟಿಯಲ್ಲಿ ಸೇರಿಸುವ ಎಲ್ಲಾ ಸಿದ್ದತೆಗಳನ್ನು ಮಾಡಿಕೊಂಡಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಪ್ರತಿಮಾ ಕೃಷಿ ಅಧಿಕಾರಿ ಆತೀಕ್, ಕತ್ತಿಗೆ ಗ್ರಾಮದ ಪಾಲಾಕ್ಷಪ್ಪ, ವಿರೂಪಾಕ್ಷಪ್ಪ, ವಿಜಯ್, ಪ್ರಸನ್ನ, ಭರ್ಮಪ್ಪ, ಪ್ರಶಾಂತ್ ಸೇರಿದಂತೆ ಅನೇಕ ರೈತರು ಇದ್ದರು.

> **ಹೊನ್ನಾಳಿ ತಾಲ್ಲೂಕಿನಲ್ಲಿ ಸುಮಾರು 17400 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದ್ದು, ವಿಶೇಷವಾಗಿ ಮೆಕ್ಕೆಜೋಳ ಬೆಳೆ ಸಂಪೂರ್ಣ ಹಾಳಾಗಿದ್ದು, ಮುಂದಿನ ದಿನಗಳಲ್ಲಿ ಮಳೆಯಾದರೂ ಕೂಡ ಬೆಳೆಗಳಿಗೆ ಯಾವುದೇ ಪ್ರಯೋಜನ ವಾಗುವುದಿಲ್ಲ. ಹೆಚ್ಚೆಂದರೆ ಕುಡಿಯುವ ನೀರಿಗೆ ಅನುಕೂಲವಾಗಬಹುದಷ್ಟೇ. ಮೆಕ್ಕೆಜೋಳದ ಜೊತೆಗೆ ರಾಗಿ, ಹತ್ತಿ, ಶೇಂಗಾ, ಊಟದ ಜೋಳ, ತಂಬಾಕು ಮುಂತಾದ ಬೆಳೆಗಳು ಬಹುಪಾಲು ಹಾಳಾಗಿದ್ದು, ಶೇಕಡ 90 ರಷ್ಟು ಬೆಳೆ ಹಾನಿಯಾಗಿದೆ.**
>
> **- ಡಿ.ಜಿ. ಶಾಂತನಗೌಡ, ಶಾಸಕರು**

# ಸ್ವರತಿ, ಸುಳ್ಳು ಹೇಳುವ ಪ್ರಧಾನಿ ಮೋದಿ

(1ನೇ ಪುಟದಿಂದ) ಪಡಬೇಕು. ಆದರೆ, ತಾವೇ ಸಾಧನೆ ಮಾಡಿರುವಂತೆ ತೋರಿಸಿಕೊಳ್ಳುವುದು ನಾಚಿಕೆಯ ಸಂಗತಿ ಎಂದು ಅವರಿಗೆ ಹೇಳಬೇಕಿದೆ ಎಂದು ಲಲಿತಾ ನಾಯ್ಕ್ ಹೇಳಿದರು.

ಸಂಸತ್ ಭವನ ಉದ್ಘಾಟನೆಯಾದ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಆಹ್ವಾನ ನೀಡಿರಲಿಲ್ಲ. ಅವರು ವಿಧವೆ, ಕಪ್ಪು ಬಣ್ಣದವರು, ದಲಿತ - ಬುಡಕಟ್ಟು ಮಹಿಳೆ ಎಂಬುದೇ ಇದಕ್ಕೆ ಕಾರಣ ಎಂದು ಮಾಜಿ ಸಚಿವೆ ಆರೋಪಿಸಿದರು. ಪ್ರಧಾನಿ ಮೋದಿ ಸಹ ಉದ್ಘಾಟನೆಗೆ ಒಬ್ಬರೇ ಹೋಗಿದ್ದರು. ಅವರ ಮಡದಿ ಎಲ್ಲೋ ಇದ್ದಾರೆ. ಅವರಿಗೂ ಉದ್ಘಾಟನೆಯ ವೇಳೆ ಅವಕಾಶವಿಲ್ಲ ಎಂದು ಆಕ್ಷೇಪಿಸಿದರು.

ಮಾಗನೂರು ಬಸಪ್ಪ ಅವರು ಕಾಯಕ ಯೋಗಿಗಳಾಗಿದ್ದರು. ಅವರು ನೂರು - ಸಾವಿರ ಮೋದಿಗೆ ಸಮ ಎಂದು ಲಲಿತಾ ನಾಯ್ಕ್ ಬಣ್ಣಿಸಿದರು. ದೇವಾಲಯಗಳಲ್ಲಿ ಪ್ರಾಣ ಪ್ರತಿಷ್ಠಾಪನೆ ಮಾಡುತ್ತಾರೆ. ಕಲ್ಲಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುವವರು ಮನೆಯಲ್ಲಿ ಜನರ ಸಾವು ಸಂಭವಿಸಿದಾಗ ಅದೇ ಕೆಲಸ ಮಾಡಿ ಜೀವ ಉಳಿಸಬಹುದಲ್ಲವೇ? ಎಂದು ಪ್ರಶ್ನಿಸಿದರು.

ಈ ಪ್ರಶ್ನೆ ಕೇಳಿದರೆ ನನ್ನ ಹಿಂದೂ ಧರ್ಮ ದ್ರೋಹಿ ಎನ್ನುತ್ತಾರೆ. ಕೊಲೆ ಬೆದರಿಕೆ ಹಾಕುತ್ತಾರೆ. ಕೊಲೆ ಮಾಡಿದರೂ ನಮ್ಮಂತಹ ಸಾವಿರ ಜನ ಹುಟ್ಟಿಕೊಳ್ಳುತ್ತಾರೆ. ನಾವು ಇರುವವರೆಗೂ ಈ ಮಾತುಗಳನ್ನು ಹೇಳುತ್ತಲೇ ಇರುತ್ತವೆ. ಬಸವಣ್ಣನವರೂ ಸಹ ಸಮಾಜ ತಿದ್ದಲು ಇಂತಹ ಮಾತುಗಳನ್ನು ಹೇಳುತ್ತಲೇ ಇದ್ದರು ಎಂದು ಲಲಿತಾ ನಾಯ್ಕ್ ಹೇಳಿದರು.

### ಪುರುಷರಿಗೂ ಬೇಕು ರಕ್ಷಣೆ

ಹೆಣ್ಣು ಹಾಗೂ ಗಂಡು ಯಾರಿಗೇ ಆಗಲಿ ಶೋಷಣೆ ಆಗಬಾರದು. ಈ ಕಾರಣಕ್ಕಾಗಿಯೇ ಪುರುಷ ರಕ್ಷಣಾ ಸಮಿತಿ ಸ್ಥಾಪಿಸಿದ್ದಾಗಿ ಮಾಜಿ ಸಚಿವೆ ಬಿ.ಟಿ. ಲಲಿತಾನಾಯ್ಕ್ ಹೇಳಿದರು.

ನವ ವಿವಾಹಿತೆಯೊಬ್ಬಳು ತನ್ನ ಗಂಡನಿಂದ ಹಣ ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಇಡೀ ಕುಟುಂಬವನ್ನು ಪೀಡಿಸಿದ್ದಳು. ಗಂಡ ಜೈಲು ಪಾಲಾದರೆ, ಮಾವ ಹೃದಯಾಘಾತದಿಂದ ಸಾವನ್ನಪ್ಪಿದರು. ಈ ಘಟನೆ ನನ್ನ ಗಮನಕ್ಕೆ ಬಂದಾಗ ಪುರುಷ ರಕ್ಷಣಾ ಸಮಿತಿ ರಚಿಸಿದ್ದಾಗಿ ಮಾಜಿ ಸಚಿವೆ ತಿಳಿಸಿದರು.



# ದೇವರಬೆಳಕೆರೆ ಪಿಕಪ್ ನಾಲೆ ಹೂಳು ತೆಗೆಸಿದ ಶ್ರೀನಿವಾಸ್

ಮಲೇಬೆನ್ನೂರು, ಆ. 26- ದೇವರಬೆಳಕೆರೆ ಪಿಕಪ್ ಡ್ಯಾಂನ ಗಾಂಜಿ ವೀರಪ್ಪ ನಾಲೆಯಲ್ಲಿ ತುಂಬಿಕೊಂಡಿದ್ದ ಹೂಳನ್ನು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಅವರು ಭದ್ರಾ ನಾಲಾ ನಂ. 3 ಉಪ ವಿಭಾಗದ ಎಇಇ ಧನಂಜಯ ಹಾಗೂ ರೈತರ ಸಮ್ಮುಖದಲ್ಲಿ ಇಟಾಚಿ ಮೂಲಕ ತೆರವುಗೊಳಿಸಿದರು.

ನಾಲೆಯಲ್ಲಿ ಹೂಳು ತುಂಬಿಕೊಂಡಿದ್ದರಿಂದ ಬನ್ನಿಕೋಡು, ಶಿವನಹಳ್ಳಿ ಸೇರಿದಂತೆ, ಕೊನೆ ಭಾಗದ ರೈತರಿಗೆ ನೀರು ಹೋಗುತ್ತಿರಲಿಲ್ಲ. ಈ ಬಗ್ಗೆ ರೈತರು ಶ್ರೀನಿವಾಸ್ ಅವರ ಗಮನ ಸೆಳೆದಾಗ ಇಟಾಚಿಯೊಂದಿಗೆ ಸ್ಥಳಕ್ಕೆ ಆಗಮಿಸಿ ಹೂಳನ್ನು ತೆರವುಗೊಳಿಸಿ ನಾಲೆಯಲ್ಲಿ ನೀರು ಸರಾಗವಾಗಿ ಕೆಳ ಭಾಗಕ್ಕೆ ಹೋಗುವಂತೆ ಮಾಡಿ ರೈತರ ಮೆಚ್ಚುಗೆಗೆ ಪಾತ್ರರಾದರು.

# ಅರಸೀಕೆರೆ ರಸ್ತೆ ಅಗಲೀಕರಣ ಕಾಮಗಾರಿ ವಿಳಂಬ-ಅವೈಜ್ಞಾನಿಕ : ಸಂಸದ ದೇವೇಂದ್ರಪ್ಪ




ಹರಪನಹಳ್ಳಿ, ಆ.26- ಅರಸೀಕೆರೆ ರಸ್ತೆ ಅಗಲೀಕರಣ ಕಾಮಗಾರಿ ವಿಳಂಬ ಹಾಗೂ ಅವೈಜ್ಞಾನಿಕವಾಗಿದೆ ಎಂದು ಸಂಸದ ವೈ.ದೇವೇಂದ್ರಪ್ಪ ತಾಲ್ಲೂಕಿನ ಅರಸೀಕೆರೆ ಗ್ರಾಮದ ವಿವಿಧ ಕಾಮಗಾರಿಗಳನ್ನು ವೀಕ್ಷಿಸಿ ನಂತರ ಮಾತನಾಡಿ ಬಸ್ ನಿಲ್ದಾಣ, ಕರೆಂಟ್ ಆಫೀಸ್, ರಸ್ತೆ ಅಗಲೀಕರಣ, ಅರಸೀಕೆರೆ - ಉಚ್ಚಂಗಿದುರ್ಗ ರಸ್ತೆ ಮಧ್ಯೆದಲ್ಲಿರುವ ಸೇತುವೆ ಕುಸಿದಿದೆ ಹಾಗೂ ರಸ್ತೆ ಅಗಲೀಕರಣ ಕಾಮಗಾರಿ ಸಂಪೂರ್ಣ ಅವೈಜ್ಞಾನಿಕವಾಗಿದೆ.

ಕಾಮಗಾರಿ ಪ್ರಾರಂಭವಾಗಿ 2 ವರ್ಷಗಳಾದರೂ ಕಾಮಗಾರಿ ವಿಳಂಬವಾಗಿದೆ ಎಂದು ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು. ಕೂಡಲೇ ಕಾಮಗಾರಿ ಸರಿಪಡಿಸಿ, ಸಂಪೂರ್ಣಗೊಳಿಸಬೇಕೆಂದು ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ. ಇನಾಯತ್ ಉಲ್ಲಾ, ಮುಖಂಡರಾದ ಪೂಜಾರ್ ಮರಿಯಪ್ಪ, ಎ. ಮಹಾಬ್ದುಲ್ ಸಾಬ್, ಎ.ಹೆಚ್. ಪಂಪಣ್ಣ, ವೈ.ಟಿ. ಕೊಟ್ರೇಶ್, ಬಷೀರ್ ಸಾಬ್, ಮುನ್ನ ಸಾಬ್, ವೆಂಕೋಬ ಶೆಟ್ರು, ಇಂಜಿನಿಯರ್‌ಗಳಾದ ನಾಗರಾಜ್ ಎ.ಇ.ಇ., ನಿರಂಜನ್, ಸರುಉಲ್ಲಾ ಹಾಗೂ ಗ್ರಾಮದ ಮುಖಂಡರು ಹಾಜರಿದ್ದರು.


|| ಶ್ರೀ ಕೊಟ್ಟೂರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಸಿಟಿ, ವಿದ್ಯಾರ್ಥಿ ಭವನ, ಕೆ.ಇ.ಬಿ. ಆಫೀಸ್ ಎದುರು ವಾಸಿಗಳಾದ

ಶ್ರೀ ರಾಜಶೇಖರಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 23.08.2023ನೇ ಬುಧವಾರ ಸಂಜೆ 4.30ಕ್ಕೆ ನಮ್ಮ ಸಹೋದರನಾದ

**ಶ್ರೀ ಮಲ್ಲಿಕಾರ್ಜುನ ಪಲ್ಲಾಗಟ್ಟೆ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ : 27.08.2023ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ**

**ಮೃತರ ಸ್ವಗೃಹ, ಕೆ.ಇ.ಬಿ. ಆಫೀಸ್ ಎದುರು, ದಾವಣಗೆರೆ**

ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ಶೋಕ ತಪ್ತರು : ಮೃತರ ಧರ್ಮಪತ್ನಿ, ಮಕ್ಕಳು ಹಾಗೂ ಸಹೋದರರು.**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.


# ನಗರದಲ್ಲಿಂದು ಪಟ್ಟಸಾಲಿ ಸಮಾಜದ ಸಭೆ

ಪಟ್ಟಸಾಲಿ ನೇಕಾರ ಸಮಾಜ ಸುಧಾರಣಾ ಸಂಘ, ಪಟ್ಟಸಾಲಿ ನೇಕಾರ ಯುವಕರ ಸಂಘ, ಪಟ್ಟಸಾಲಿ ನೇಕಾರ ಮಹಿಳಾ ಸಂಘದ ವಾರ್ಷಿಕ ಮಹಾಸಭೆಯು ಇಂದು ಬೆಳಿಗ್ಗೆ 10 ಗಂಟೆಗೆ ಪಟ್ಟಸಾಲಿ ನೇಕಾರ ವಿದ್ಯಾರ್ಥಿ ನಿಲಯದಲ್ಲಿ ನಡೆಯಲಿದೆ. ಪಟ್ಟಸಾಲಿ ಸಮಾಜದ ಗುರುಗಳಾದ ಶ್ರೀ ಗುಳೇದಗುಡ್ಡದ ಬಸವರಾಜ ಪಟ್ಟದಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಟ್ಟಸಾಲಿ ನೇಕಾರ ಸಮಾಜ ಸುಧಾರಣಾ ಸಂಘದ ಗೌರವಾಧ್ಯಕ್ಷೆ ನಾಗರತ್ನಮ್ಮ ವಹಿಸಲಿದ್ದಾರೆ.


ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟಕ ಪಟ್ಟಸಾಲಿ ನೇಕಾರ ಸಂಘ ಸಂಸ್ಥಾಪಕ ರಾಜ್ಯಾಧ್ಯಕ್ಷ ಹೆಚ್.ಶಿವಪ್ಪ ಶೆಟ್ರು ಪಾಲ್ಗೊಳ್ಳಲಿದ್ದಾರೆ. ಸಂಘದ ಜಿಲ್ಲಾಧ್ಯಕ್ಷ ಡಿ.ಸಿ.ಶ್ರೀನಿವಾಸ್ ಚಿನ್ನಿಕಟ್ಟೆ, ಗೌರವ ಸಲಹೆಗಾರ ನಾಗೇಶಪ್ಪ ಎನ್. ಚಿನ್ನಿಕಟ್ಟೆ, ಹನುಮಂತಪ್ಪ ಪಿ. ಗುತ್ತಲ್, ಮಹಿಳಾ ಸಂಘದ ಅಧ್ಯಕ್ಷೆ ಗದಿಗೆಮ್ಮ ಯಲ್ಲಪ್ಪ ಕದರಮಂಡಲಗಿ, ಟಿ.ಕೃಷ್ಣಪ್ಪ, ಲಿಂಗರಾಜು ಜೆ. ಹುಲಹಳ್ಳಿ, ನಾಗರಾಜ್ ಹೆಚ್. ರಾಂಪುರ ಉಪಸ್ಥಿತರಿರುವರು.

# ಋಗ್ವೇದ ನಿತ್ಯ, ನೂತನ ಉಪಕರ್ಮ

ದಾವಣಗೆರೆ, ಆ. 26- ಶ್ರೀ ಶಂಕರ ಸೇವಾ ಸಂಘದ ಆಶ್ರಯದಲ್ಲಿ ಇದೇ ದಿನಾಂಕ 29 ಋಗ್ವೇದ ನಿತ್ಯ ಮತ್ತು ನೂತನ ಉಪಕರ್ಮವನ್ನು ಹಾಗೂ ದಿನಾಂಕ 30 ರಂದು ಬೆಳಿಗ್ಗೆ 6 ಗಂಟೆಗೆ ಯಜುರ್ವೇದ ನಿತ್ಯ ಮತ್ತು ನೂತನ ಉಪಕರ್ಮವನ್ನು ನಗರದ ಶ್ರೀ ಶಾರದಾಂಬಾ ದೇವಸ್ಥಾನದಲ್ಲಿ ಆಯೋಜಿಸಲಾಗಿದೆ. ಆಸಕ್ತ ತ್ರಿಮತಸ್ಥ ಬ್ರಾಹ್ಮಣರು ಹೆಸರು ನೋಂದಾಯಿಸಲು 08192-221680, ಮೊ: 8296408068, 9964146122 ಸಂಪರ್ಕಿಸುವಂತೆ ಕಾರ್ಯದರ್ಶಿ ಶ್ರೀನಿವಾಸ ಕೆ. ಜೋಶಿ ತಿಳಿಸಿದ್ದಾರೆ.


## ಒಂಬತ್ತನೇ ವರ್ಷದ ಪುಣ್ಯಸ್ಮರಣೆ

ಜನನ: 28.06.1945



ಲಿಂಗೈಕ್ಯ: 27.08.2014

**ದಿ|| ಶ್ರೀ ಟಿ. ಪಂಚಾಕ್ಷರಪ್ಪ ಮರಿಸ್ವಾಮಿ**

ಶೈಲ ಹೊಸ್ಯೆರೀಸ್, ಮಂಡಿಪೇಟೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ,

**ಶ್ರೀಮತಿ ಟಿ.ಪಿ. ಸೌಭಾಗ್ಯಮ್ಮ ಪಂಚಾಕ್ಷರಪ್ಪ ಮತ್ತು ಮಕ್ಕಳು.ಸಹೋದರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಸ್ವಾಮಿ ವಂಶಸ್ಥರು ಹಾಗೂ ಬಂಧು-ಮಿತ್ರರು.**


# ಚಂದ್ರಯಾನ ತಾಣವೀಗ ಶಿವ ಶಕ್ತಿ

(1ನೇ ಪುಟದಿಂದ) ಲಾಗುವುದು ಎಂದು ಹೇಳಿದರು.

ಚಂದ್ರನ ಮೇಲೆ ಗಗನನೌಕೆ ಇಳಿದಾಗ ಆ ಸ್ಥಳಕ್ಕೆ ಹೆಸರಿಡುವುದು ವೈಜ್ಞಾನಿಕ ಸಂಪ್ರದಾಯವಾಗಿದೆ. ಚಂದ್ರಯಾನ - 3 ಇಳಿದ ಸ್ಥಳವನ್ನು ಶಿವ ಶಕ್ತಿ ಪಾಯಿಂಟ್ ಎಂದು ಭಾರತ ಗುರುತಿಸಲಿದೆ ಎಂದವರು ಹೇಳಿದರು.

ಶಿವ ಮಾನವೀಯ ಕಲ್ಯಾಣದ ಸೂಚಕವಾಗಿದೆ ಹಾಗೂ ಶಕ್ತಿ ಈ ಮಾನವ ಕಲ್ಯಾಣ ಸಾಕಾರಗೊಳಿಸುವ ಬದ್ಧತೆಯಾಗಿದೆ ಎಂದೂ ಮೋದಿ ತಿಳಿಸಿದ್ದಾರೆ.

ಧೃಡವಾದ ಇಚ್ಛಾಶಕ್ತಿ ಇದ್ದರೆ ಯಶಸ್ಸು ದೊರೆಯಲಿದೆ ಎಂಬುದಕ್ಕೆ ನಾವೇ ಸಾಕ್ಷಿ. ಅಗತ್ಯ ತಂತ್ರಜ್ಞಾನವಿಲ್ಲದೆ, ಹಿಂದುಳಿದಿದ್ದ ನಾವು ವಿಶ್ವದಲ್ಲಿ ಚಂದ್ರನ ಮೇಲೆ ಇಳಿದ ರಾಷ್ಟ್ರವಾಗಿದೆ. ಈ ಕೀರ್ತಿಗೆ ಇಸ್ರೋ ಸಂಸ್ಥೆ ಕಾರಣ ಎಂದರು.

ಇದಕ್ಕೂ ಮುನ್ನ ಪ್ರಧಾನಿ ಅವರು ಇಸ್ರೋ ಅಧ್ಯಕ್ಷ ಎಸ್.ಸೋಮನಾಥ್ ಅವರಿಗೆ ಭಾರತದ ಪ್ರಜೆಗಳ ಪರವಾಗಿ ಸೆಲ್ಯೂಟ್ ಹೊಡೆದರು.

ಬೆಂಗಳೂರಿಗೆ ಬಂದ ಪ್ರಧಾನಿ, ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಅವರಿಗೆ ಅಭಿನಂದಿಸಿದರು. ಚಂದ್ರಯಾನ - 3ರ ಪ್ರಗತಿಯ ಕುರಿತು ಸೋಮನಾಥ್ ವಿವರ ನೀಡಿದರು.

ದಕ್ಷಿಣ ಆಫ್ರಿಕಾದ ಗ್ರೀಸ್ ಪ್ರವಾಸದಿಂದ ನೇರವಾಗಿ ನಗರಕ್ಕೆ ಆಗಮಿಸಿ ಇಸ್ರೋ ಟೆಲಿಮೆಟ್ರಿಕ್ ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ ಮಿಷನ್ ಕಂಟ್ರೋಲ್ ಕಾಂಪ್ಲೆಕ್ಸ್‌ನಲ್ಲಿ ವಿಜ್ಞಾನಿಗಳ ತಂಡವನ್ನು ಭೇಟಿಯಾಗಿ ಚಂದ್ರನ ಮೇಲೆ ಯಶಸ್ವಿಯಾಗಿ ವಿಕ್ರಮ್ ಇಳಿಸಿದ್ದಕ್ಕಾಗಿ ಅಭಿನಂದನೆ ಸಲ್ಲಿಸಿದರು.

ಅಭಿನಂದಿಸಿ ಮುಂದುವರೆದು ಮಾತನಾಡಿದ ಅವರು, ಈ ಬಾರಿ ನಾನು ತುಂಬಾ ಚಂಚಲನಾಗಿದ್ದೇನೆ. ನಾನು ದಕ್ಷಿಣ ಆಫ್ರಿಕಾದ ಪ್ರವಾಸದಲ್ಲಿದ್ದರೂ ನನ್ನ ಮನಸ್ಸು ನಿಮ್ಮೊಂದಿಗಿತ್ತು. ನಾನು ಭಾರತಕ್ಕೆ ಬಂದ ಕೂಡಲೇ ನಿಮ್ಮನ್ನು ಆದಷ್ಟು ಬೇಗ ನೋಡಬೇಕು ಎನಿಸಿತು. ಮೊದಲು ನಿಮ್ಮ ದರ್ಶನಪಡೆದು ನಿಮಗೆ ಸೆಲ್ಯೂಟ್ ಹೊಡೆಯಲು ನಿರ್ಧರಿಸಿದೆ ಎಂದಾಗ ಅವರ ಕಣ್ಣಂಚಿನಲ್ಲಿ ಕಣ್ಣೀರು ಇಣುಕಿತು.

ಯಾರು ಮಾಡದ ಕೆಲಸವನ್ನು ನಾವು ಮಾಡಿ ತೋರಿಸಿದ್ದೇವೆ. ಇದು ಇಂದಿನ ಭಾರತ. ನಿರ್ಭೀತ ಮತ್ತು ಹೋರಾಟದ ದೇಶ. ಹೊಸದಾಗಿ ಆಲೋಚಿಸುವ ಚಿಂತನೆಗಳನು ನಮ್ಮಲ್ಲಿ ಇವೆ ಎಂಬುದು ಬಿಂಬಿತವಾಯಿತು ಎಂದರು.

# ನಿಂತಿದ್ದ ಬೋಗಿಗೆ ಬೆಂಕಿ : 9 ಸಾವು

ಮಧುರೈ, ಅ. 26 - ನಿಂತಿದ್ದ ರೈಲ್ವೆ ಬೋಗಿಯಲ್ಲಿ ಬೆಂಕಿ ಹತ್ತಿಕೊಂಡ ಕಾರಣ, ತಮಿಳುನಾಡಿನ ರಾಮೇಶ್ವರಕ್ಕೆ ತೆರಳುತ್ತಿದ್ದ ಒಂಭತ್ತು ಯಾತ್ರಿಗಳು ಸಾವನ್ನಪ್ಪಿದ ಘಟನೆ ನಡೆದಿದೆ.

ಖಾಸಗಿ ಬೋಗಿಯಲ್ಲಿ ಲಖ್ನೌ ದಿಂದ ಬಂದಿದ್ದವರು ಸಾವಿಗೀಡಾಗಿದ್ದಾರೆ. ಇವರಲ್ಲಿ ಬಹುತೇಕರು ಉತ್ತರ ಪ್ರದೇಶದ ರಾಜಧಾನಿ ಲಖ್ನೌ ಹಾಗೂ ಹತ್ತಿರದ ಪ್ರದೇಶದವರು. ಬೋಗಿಯಲ್ಲಿ ಅಕ್ರಮವಾಗಿ ತೆಗೆದುಕೊಂಡು ಹೋಗುತ್ತಿದ್ದ ಸಿಲಿಂಡರ್ ಕಾರಣದಿಂದ ಅವಘಡ ಸಂಭವಿಸಿದೆ ಎಂದು ರೈಲ್ವೆ ತಿಳಿಸಿದೆ.

ಬಾಗಿಲಿಗೆ ಹಾಕಿದ್ದ ಬೀಗ ತೆರೆದ ನಂತರ ಒಳಗಿದ್ದವರು ಹೊರಗೆ ಬರಲು ಸಾಧ್ಯವಾಯಿತು. ಇದರಿಂದ ದೊಡ್ಡ ದುರಂತ ತಪ್ಪಿದೆ ಎಂದು ಅವಘಡದಲ್ಲಿ ಬದುಕುಳಿದವರು ತಿಳಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡ 20 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಳಿಗ್ಗೆ 5.15ರ ಸಮಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಅಗ್ನಿಶಾಮಕ ದಳದವರು ಅರ್ಧ ಗಂಟೆ ನಂತರ ಸ್ಥಳಕ್ಕೆ ತಲುಪಿದ್ದಾರೆ. ಬೆಳಿಗ್ಗೆ 7.15ಕ್ಕೆ ಬೆಂಕಿ ನಂದಿಸಲಾಗಿದೆ. ಇದು ಖಾಸಗಿ ಪಾರ್ಟಿಯ ಬೋಗಿ ಆಗಿತ್ತು. ಆಗಸ್ಟ್ 25ರಂದು ನಾಗರ್‌ಕೋಯಿಲ್ ಜಂಕ್ಷನ್‌ನಲ್ಲಿ ಪುಣೂರು - ಮಧುರೈ ಎಕ್ಸ್‌ಪ್ರೆಸ್ ಮೂಲಕ ಬಂದಿತ್ತು. ಬೋಗಿಯನ್ನು ಪ್ರತ್ಯೇಕಗೊಳಿಸಿ ಮಧುರೈ ಸ್ಟೇಬ್ಲಿಂಗ್ ಮಾರ್ಗದಲ್ಲಿ ಇರಿಸಲಾಗಿತ್ತು.

ಈ ಬೋಗಿಯಲ್ಲಿದ್ದ ಪ್ರಯಾಣಿಕರು ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ತಂದಿದ್ದರು. ಇದರಿಂದ ಬೆಂಕಿ ಕಾಣಸಿಕೊಂಡಿದೆ ಎಂದು ರೈಲ್ವೆ ಹೇಳಿಕೆಯಲ್ಲಿ ತಿಳಿಲಾಗಿದೆ. ಘಟನಾ ಸ್ಥಳದಲ್ಲಿ ಅಡುಗೆ ಅನಿಲದ ಸಿಲಿಂಡರ್, ಆಲೂಗಡ್ಡೆ ಚೀಲ, ಕಟ್ಟಿಗೆ ಹಾಗೂ ಅಡುಗೆ ಪಾತ್ರೆಗಳು ಪತ್ತೆಯಾಗಿವೆ. ಇದು ಬೋಗಿಯಲ್ಲಿ ಅಡುಗೆ ಮಾಡಿದ್ದನ್ನು ತೋರಿಸುತ್ತಿದೆ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas




**ದಿನಾಂಕ : 27.08.2023 ರಿಂದ 02.09.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಈ ವಾರವೆಲ್ಲಾ ಅನಾವಶ್ಯಕ ತಿರುಗಾಟವಾಗಲಿದೆ. ಕರಾರುಬದ್ಧವಾದ ವ್ಯವಹಾರಗಳನ್ನು ಆದಷ್ಟು ಬೇಗ ಬಗೆಹರಿಸಿಕೊಳ್ಳುವುದು ಮೇಲು. ಆವೇಶಯುಕ್ತ ಮಾತುಗಳನ್ನಾಡುವುದರಿಂದ ವೈಯಕ್ತಿಕ ಸಂಬಂಧಗಳಿಗೆ ಧಕ್ಕೆ ಬರಬಹುದು. ಕಲಾವಿದರಿಗೆ ಬೇಡಿಕೆ ಹೆಚ್ಚಲಿದೆ. ಜೊತೆಗೆ ಸಂಪಾದನೆಯೂ ವೃದ್ಧಿಸಲಿದೆ. ಹಣಕಾಸಿನ ಸ್ಥಿತಿ ಸಾಕಷ್ಟು ಸುಧಾರಿಸಲಿದೆ. ಆಸ್ತಿ ಖರೀದಿ ವಿಚಾರದಲ್ಲಿ ಅನುಭವಿಗಳ ಸಲಹೆ ಪಡೆಯಿರಿ. ಉದ್ಯಮಿಗಳು ತಮ್ಮ ಕೆಲಸಗಾರರೊಂದಿಗೆ ಸೌಹಾರ್ದತೆ ಬೆಳೆಸಿಕೊಳ್ಳುವುದು ಉತ್ತಮ. ಭಾನು-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವ್ಯವಹಾರಕ್ಕೆ ಸಂಬಂಧಿಸಿದ ಮಾತುಕತೆಗಳನ್ನಾಡುವಾಗ ಆವೇಶ ಭರಿತವಾದ ಮಾತುಗಳಿಗೆ ಅವಕಾಶ ಕೊಡಬೇಡಿ. ಹೊಸಮನೆ ಕಟ್ಟುತ್ತಿರುವವರು ಕಟ್ಟಡ ಕಾರ್ಮಿಕರೊಂದಿಗೆ ಸೌಮ್ಯ ರೀತಿಯಲ್ಲಿ ನಡೆದುಕೊಳ್ಳುವುದು ಮೇಲು. ಮಕ್ಕಳು ಮನೆಯಲ್ಲಿ ಸಾಕುಪ್ರಾಣಿಗಳನ್ನು ಸಾಕಲು ಇಚ್ಛಿಸುವರು. ಇದರ ಬಗ್ಗೆ ಆಲೋಚಿಸುವುದು ಉತ್ತಮ. ಪೂರ್ವಿಕರ ಆಸ್ತಿ ಉತ್ತಮ ಬೆಲೆಗೆ ಮಾರಾಟವಾಗಲಿದೆ. ಸೋದರನು ಕೃಷಿ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ತೋರುವನು. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು ಗೋ ಸೇವೆ ಮಾಡಿ. ಸೋಮ-ಬುಧ-ಶುಕ್ರ-ಶುಭ ದಿನಗಳು.

**ಮಿಥುನ (3,4, ಆರಿವದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಮತ್ತೊಬ್ಬರಿಗೋಸ್ಕರ ನಿಮ್ಮ ತನವನ್ನು ಬಿಡಬೇಡಿ ಸಂಗೀತಗಾರರಿಗೆ ಬೇಡಿಕೆ ಹೆಚ್ಚಲಿದೆ. ಕಂಡವರನ್ನೆಲ್ಲಾ ಸ್ನೇಹಿತರೆಂದು ನಂಬಿ ಮೋಸ ಹೋಗಬೇಡಿ. ಬಹಳ ಕಾಲದಿಂದ ಕಾಡುತ್ತಿದ್ದ ಕೌಟುಂಬಿಕ ವಿಚಾರಗಳಿಗೆ ಕಾಲಕ್ರಮೇಣ ಉತ್ತರ ಸಿಗಲಿದೆ. ಮತ್ತೊಬ್ಬರ ಜವಾಬ್ದಾರಿ ಹೊರುವ ಮುನ್ನ ನಿಮ್ಮ ಇತಿಮಿತಿಯ ಅರಿವಿರುವುದು ಉತ್ತಮ. ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ಮಾಲೀಕರೊಂದಿಗೆ ಮುಕ್ತ ಮನಸ್ಸಿನಿಂದ ಮಾತನಾಡಿ. ಹಣಕಾಸಿನ ಸಮಸ್ಯೆ ಇಷ್ಟರಲ್ಲೇ ಬಗೆಹರಿಯಲಿದೆ. ಗುರುಗಳ ಸೇವೆ ಮಾಡಿ. ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ನೀವು ಪರಿಶ್ರಮದಿಂದ ಆರಂಭಿಸಿದ ಉದ್ಯಮವು ವೃದ್ಧಿಸಲಿದ್ದು, ನಿಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸುವುದರೊಂದಿಗೆ ಸಮಾಜದಲ್ಲಿ ಗೌರವವನ್ನು ಹೆಚ್ಚಿಸಲಿದೆ. ರೈತಾಪಿ ಜನರು ತಮ್ಮ ಬೆಳೆಯನ್ನು ಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಹರಸಾಹಸ ಪಡುವರು. ಹಿರಿಯರ ಭೇಟಿಗೆಂದು ದೂರದೂರುಗಳಿಗೆ ಹೋಗಬೇಕಾದೀತು. ಅನಾವಶ್ಯಕ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಉತ್ತಮ. ಇಲ್ಲವಾದಲ್ಲಿ ಅರ್ಥವ್ಯವಸ್ಥೆ ಬುಡಮೇಲಾದೀತು. ಯುವಜನರು ಸ್ನೇಹಿತರ ಆಯ್ಕೆ ವಿಚಾರದಲ್ಲಿ ಎಚ್ಚರದಿಂದಿರುವುದು ಮೇಲು. ಸೋಮ-ಗುರು-ಶುಕ್ರ-ಶುಭ ದಿನಗಳು

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಕೆಟ್ಟ ಜನರ ಸಹವಾಸದಿಂದ ಮಕ್ಕಳ ನಡಾವಳಿಯಲ್ಲಿ ತೀವ್ರ ವ್ಯತ್ಯಾಸ ಕಾಣಲಿದೆ. ಇದರಿಂದಾಗಿ ಮನೆಯಲ್ಲಿ ಅಶಾಂತಿ ಉಂಟಾಗಬಹುದು. ಬಹುದಿನಗಳ ಬೇಡಿಕೆಯೊಂದು ಇಷ್ಟರಲ್ಲೇ ಈಡೇರಲಿದೆ. ದತ್ತು ಪುತ್ರ ಸ್ವೀಕಾರ ವಿಚಾರ ಹಿರಿಯರಿಂದ ಬರಲಿದ್ದು, ಅದು ತೀರ ಅವಶ್ಯಕವಾಗಿದ್ದಲ್ಲಿ ಮಗುವಿನ ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರುವುದು ಉತ್ತಮ. ಕ್ರೀಡಾಪಟುಗಳಿಗೆ ಉತ್ತಮ ತರಬೇತುದಾರರು ಸಿಗಲಿದ್ದಾರೆ. ಉಪನ್ಯಾಸಕರಿಗೆ ಉತ್ತಮ ದಿನಗಳು. ಭಾನು-ಸೋಮ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ವಿದ್ಯಾವಂತ ನಿರುದ್ಯೋಗಿಗಳು ಸದ್ಯದ ಪರಿಸ್ಥಿತಿಯಲ್ಲಿ ಸಿಕ್ಕ ಕೆಲಸಕ್ಕೆ ಸೇರಿಕೊಳ್ಳುವುದು ಮೇಲು. ರಾಜಕಾರಣಿಗಳು ತಮ್ಮ ಅಸ್ತಿತ್ವದ ವಿಚಾರದಲ್ಲಿ ಪಕ್ಷದ ಮುಖಂಡರೊಂದಿಗೆ ಗಂಭೀರವಾಗಿ ಚರ್ಚಿಸುವುದು ಮೇಲು. ಸಾರ್ವಜನಿಕ ಸಭೆ, ಸಮಾರಂಭಗಳಿಗೆ ಹೋಗು ವಾಗ ಒಡವೆ ಮೊದಲಾದ ಅಮೂಲ್ಯ ವಸ್ತುಗಳು ಕಳೆದು ಹೋಗುವ ಸಂಭವವಿದೆ. ಸಾಕಷ್ಟು ಜಾಗ್ರತೆಯಿಂದಿರುವುದು ಮೇಲು. ಕೆಲವು ವಿಚಾರಗಳಲ್ಲಿ ಯಾವುದೇ ಕಾರಣಕ್ಕೂ ಹತಾಶೆ ಭಾವವನ್ನು ಹೊಂದಬೇಡಿ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿ ಬರಲಿದೆ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮನೆಯಲ್ಲಿ ಹಿರಿಯರು ಮನೆಯವರ ನಡಾವಳಿಯಲ್ಲಿ ಕಂಡುಬರಲಿರುವ ವ್ಯತ್ಯಾಸಕ್ಕೆ ಬೇಸರ ವ್ಯಕ್ತಪಡಿಸುವರು. ಜೀವಶಾಸ್ತ್ರ ಉಪನ್ಯಾಸಕರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವವರು ತಮ್ಮ ಮೇಲಾಧಿಕಾರಿಗಳ ವಿಶ್ವಾಸ ಗಳಿಸುವರು. ಕೆಲಸ ಕಾರ್ಯಗಳ ಒತ್ತಡವೆಂದು ಆರೋಗ್ಯವನ್ನು ಅಲಕ್ಷಿಸುವುದು ಅಷ್ಟು ಒಳ್ಳೆಯದಲ್ಲ.ಹಳೇ ಸಾಲ ಗಳನ್ನು ತೀರಿಸಲು ಉತ್ತಮ ಅವಕಾಶವೊಂದು ಒದಗಿಬರಲಿದೆ. ಅದನ್ನು ಸದುಪಯೋಗ ಪಡಿಸಿಕೊಳ್ಳಿ. ದುರ್ಗಾದೇವಿಯನ್ನು ಆರಾಧಿಸಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಹಿರಿಯರೊಂದಿಗೆ ನಡೆಯಲಿರುವ ಮಾತಿನ ಚಕಮಕಿ ಸನ್ನಿವೇಶವನ್ನು ಎಲ್ಲಿಗೋ ಒಯ್ಯಬಹುದು. ಈ ವಿಷಯದಲ್ಲಿ ಉದಾಸಿನತೆ ಸಲ್ಲದು. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಯಶಸ್ಸನ್ನು ಸಾಧಿಸುವರು. ಮಹಿಳೆಯರು ಗುರಿಯಿಟ್ಟು ಆರಂಭಿಸಿದ ಕಾರ್ಯಗಳಿಗೆ ಸರ್ಕಾರದಿಂದ ನೆರವು ಸಿಗಲಿದೆ. ಮಕ್ಕಳಿಗೋಸ್ಕರ ಒಡವೆ-ವಸ್ತ್ರಗಳನ್ನು ಖರೀದಿ ನಡೆಸುವಿರಿ. ಹಣದ ಹರಿವು ಉತ್ತಮವಾಗಿದ್ದರೂ ಅಷ್ಟೇ ಖರ್ಚು ಇರುವುದರಿಂದ ಉಳಿತಾಯದ ಮಾತು ದೂರವಾದೀತು. ಗುರುಗಳನ್ನು ಆರಾಧಿಸಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಹೊಸ ವಾಹನಗಳನ್ನು ಖರೀದಿ ಮಾಡುವ ಮೊದಲು ಅದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವುದು ಮೇಲು. ಅತಿಯಾದ ಭೋಜನ ಕೂಟಗಳಲ್ಲಿ ಭಾಗವಹಿಸುವುದರಿಂದ ಆರೋಗ್ಯದ ಮೇಲೆ ಅಡ್ಡ ಪರಿಣಾಮ ಬೀರಬಹುದು. ರಾಜಕಾರಣಿ ಗಳು ಮಾಡಬಹುದಾದ ನಿಸ್ವಾರ್ಥ ಸೇವೆಯನ್ನು ಸಮಾಜ ಗೌರವಿಸಲಿದೆ. ಯಾವುದೋ ಹುಮ್ಮಸ್ಸಿನಲ್ಲಿ ರಕ್ಷಣಾ ಇಲಾಖೆ ಸೇರಿದ ಯುವಕರಿಗೆ ಅಲ್ಲಿನ ಅತೀ ಶಿಸ್ತಿಗೆ ಹೊಂದಿಕೊಳ್ಳಲು ಕಷ್ಟಪಡುವರು. ಗಣಪತಿಯನ್ನು ಪೂಜಿಸಿ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕೆಲವು ವಿಷಯಗಳಲ್ಲಿ ನಿಮ್ಮ ಅಭಿರುಚಿಯನ್ನು ಬದಲಾಯಿಸಿ ಕೊಳ್ಳುವುದು ಉತ್ತಮ. ಸಮಾಜ ಸೇವಕರು ಭಾಗವಹಿಸಲಿರುವ ಸಭೆ-ಸಮಾರಂಭ ಗಳಲ್ಲಿ ಹೆಚ್ಚಿನ ಗೌರವ ಸಲ್ಲಲಿದೆ. ಸೋದರಿಯ ಆಯ್ಕೆಯಂತೆ ಈ ಹಿಂದೆ ಖರೀದಿಸಿದ್ದ ಸ್ವತ್ತಿಗೆ ಹೆಚ್ಚಿನ ಮೌಲ್ಯ ದೊರೆಯಲಿದೆ. ಕಷ್ಟಪಟ್ಟು ಕೆಲಸ ಮಾಡುವುದೆಂದರೆ ನಿಮಗೆ ಬಲು ಇಷ್ಟ. ಸುಗಂಧ ದ್ರವ್ಯಗಳ ಚಿಲ್ಲರೆ ಮಾರಾಟಗಾರರು ಸಗಟು ವ್ಯಾಪಾರಿಗಳಿಂದ ಮೋಸ ಹೋಗುವ ಸಂಭವವಿದೆ. ಗೃಹ ನಿರ್ಮಾಣ ಸಾಮಗ್ರಿಗಳ ಮಾರಾಟ ಭರದಿಂದ ಸಾಗಲಿದೆ. ಭಾನು-ಗುರು-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಉದಯೋನ್ಮುಖ ಸಿನಿಮಾ ಕಲಾವಿದರಿಗೆ ಉತ್ತಮ ಹೆಸರನ್ನು ಗಳಿಸುವ ಅವಕಾಶ ಬರಲಿದೆ. ಪ್ರಯಾಣ ಕಾಲದಲ್ಲಿ ಭೇಟಿಯಾದ ಗಣ್ಯ ವ್ಯಕ್ತಿಗಳ ಪರಿಚಯದಿಂದಾಗಿ ನಿಮ್ಮ ಗೌರವ ಹೆಚ್ಚಲಿದೆ. ಮನೆತನದ ಗೌರವವನ್ನು ಉಳಿಸಲು ಹಿರಿಯರು ಹರ ಸಾಹಸ ಪಡುವರು. ಹೊಸ ವಾಹನವನ್ನು ಕೊಳ್ಳುವ ಮೊದಲು ಮತ್ತೊಮ್ಮೆ ಯೋಚಿಸುವುದು ಮೇಲು. ಬಂಧುಗಳ ಮನೆಯಲ್ಲಿ ನಡೆಯಲಿರುವ ಶುಭ ಸಮಾರಂಭಕ್ಕೆ ಪರಿವಾರದೊಂದಿಗೆ ಹೋಗಿ ಭಾಗವಹಿಸುವಿರಿ. ಉದ್ಯೋಗದಲ್ಲಿ ಮುಂಬಡ್ತಿ ದೊರೆಯಲಿದೆ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮನುಷ್ಯನು ಜೀವನದಲ್ಲಿ ಪದೇ ಪದೇ ಮಾಡಿಕೊಳ್ಳುವ ಎಡವಟ್ಟುಗಳಿಂದಾಗಿ ದೊಡ್ಡ ಪಾಠ ಕಲಿಯುವನು ಎಂಬ ನೀತಿಯನ್ನು ನೀವು ಆಗಾಗ ನೆನಪಿಸಿಕೊಳ್ಳುವುದು ಮೇಲು. ವಾಹನ ರಿಪೇರಿ ಮಾಡುವವರಿಗೆ ಆದಾಯದಲ್ಲಿ ಹೆಚ್ಚಳ ಕಂಡುಬರಲಿದೆ. ಬಿತ್ತನೆ ಬೀಜ ಮಾರಾಟ ಭರದಿಂದ ಸಾಗಲಿದೆ. ಮಿತಿ ಮೀರಿದ ಜವಾಬ್ದಾರಿ ನಿಮ್ಮನ್ನು ಒತ್ತಡಕ್ಕೆ ನೂಕಲಿದೆ. ಪ್ರೇಮಿಗಳು ತಪ್ಪು ತಿಳುವಳಿಕೆಯಿಂದಾಗಿ ಬೇರ್ಪಡುವ ಸಂದರ್ಭ ಬರಲಿದೆ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ತೋರುವಿರಿ ಭಾನು-ಸೋಮ-ಗುರು-ಶುಭ ದಿನಗಳು.

**ವಿಶೇಷದಿನಗಳು :**

**ದಿನಾಂಕ: 29.8.2023 ನೇ ಮಂಗಳವಾರ ಋಗ್ವೇದ ಉಪಾಕರ್ಮ (ನೂತನ್ಯೈ: ಸಹ) ದಿನಾಂಕ : 30.8.2023 ನೇ ಬುಧವಾರ ಯಜುರ್ವೇದ ಉಪಾಕರ್ಮ (ನೂತನ್ಯೈ: ಸಹ) ದಿನಾಂಕ: 31.8.2023 ನೇ ಗುರುವಾರ ನೂಲು ಹುಣ್ಣಿಮೆ. ಶ್ರೀ ರಾಘವೇಂದ್ರ ಸ್ವಾಮಿಗಳ ಪೂರ್ವಾರಾಧನೆ (ಮಂತ್ರಾಲಯ)**
**ದಿನಾಂಕ: 1.9.2023 ನೇ ಶುಕ್ರವಾರ ಶ್ರೀ ರಾಘವೇಂದ್ರಸ್ವಾಮಿಗಳ ಮಧ್ಯಾರಾಧನೆ**
**ದಿನಾಂಕ: 02.09.2023ನೇ ಶನಿವಾರ ಶ್ರೀ ರಾಘವೇಂದ್ರಸ್ವಾಮಿಗಳ ಉತ್ತರಾಧನೆ.**

## ಮೈಸೂರಿನಲ್ಲಿ ಸ್ವದೇಶಿ ಉತ್ಪನ್ನಗಳ ಪ್ರದರ್ಶನ, ಮಾರಾಟ ಕೇಂದ್ರ

ಬೆಂಗಳೂರು, ಆ.26 - ಸ್ವದೇಶಿ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ಬೃಹತ್ ವಸ್ತು ಪ್ರದರ್ಶನ ಕೇಂದ್ರವನ್ನು ಮೈಸೂರು ನಗರದಲ್ಲಿ ಪ್ರಾರಂಭಿಸುವುದಾಗಿ ಸಣ್ಣ ಕೈಗಾರಿಕಾ ಸಚಿವ ಶರಣಬಸಪ್ಪ ದರ್ಶನಾಪುರ್ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲೂ ಯೂನಿಟ್ ಮಾಲ್ ಸ್ಥಾಪನೆಗೆ ಪ್ರತಿ ರಾಜ್ಯಕ್ಕೆ 193 ಕೋಟಿ ರೂಪಾಯಿ ಬಡ್ಡಿ ರಹಿತ ಸಾಲ ನೀಡಲಿದೆ ಎಂದರು. ಎರಡರಿಂದ 10 ಎಕರೆ ವಿಸ್ತೀರ್ಣದಲ್ಲಿ ಈ ಮಾಲ್ ಸ್ಥಾಪಿಸಬೇಕಿದೆ. ಇದಕ್ಕಾಗಿ ಬೆಂಗಳೂರು ಇಲ್ಲವೆ ಮೈಸೂರಿನಲ್ಲಿ ಸ್ಥಾಪಿಸಬೇಕು ಎಂದು ತೀರ್ಮಾನಿಸಿದ್ದರಾದರು. ರಾಜಧಾನಿಯಲ್ಲಿ ಸ್ಥಳದ ಅಭಾವವಿದೆ. ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಅರಮನೆ ನಗರಿಯಲ್ಲೇ ಪ್ರಾರಂಭಿಸುತ್ತೇವೆ ಎಂದು ಹೇಳಿದರು.

ಎಲ್ಲಾ ರಾಜ್ಯಗಳಲ್ಲಿ ಉತ್ಪಾದನೆಯಾಗುವ ವಸ್ತುಗಳ ಪ್ರದರ್ಶನ ಮತ್ತು ಮಾರಾಟದ ಕೇಂದ್ರ ಇದಾಗಲಿದೆ. ಪ್ರತಿ ರಾಜ್ಯಕ್ಕೂ ಪ್ರತ್ಯೇಕ ಮಳಿಗೆ ನೀಡಲಾಗುವುದು. ಎಲ್ಲಾ ರಾಜ್ಯಗಳಿಗೂ ಹಂಚಿಕೆಯಾಗಿ ಉಳಿಯುವ ಎಲ್ಲಾ ಮಳಿಗಳಲ್ಲಿ ಕರ್ನಾಟಕದ ಉತ್ಪನ್ನಗಳ ಮಾರಾಟಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಸಚಿವರು ಹೇಳಿದರು.

## ಚಂದ್ರಯಾನದಿಂದ ವೈಜ್ಞಾನಿಕ ಮನೋಭಾವ ಬೆಳೆಸಬೇಕಿದೆ : ಮೋದಿ

ನವದೆಹಲಿ, ಆ. 26 - ಚಂದ್ರಯಾನ - 3ರ ಯಶಸ್ಸಿನಿಂದ ದೊರೆತ ಉತ್ಸಾಹವನ್ನು ಯುವ ಪೀಳಿಗೆಯಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಬಳಸಬೇಕಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಚಂದ್ರಯಾನ - 3ರ ಯಶಸ್ಸಿನ ಹಿನ್ನೆಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಚಂದ್ರಯಾನ - 2 ಪತನಗೊಂಡ ಚಂದ್ರನ ಮೇಲಿನ ಸ್ಥಳಕ್ಕೆ ತಿರಂಗ ಎಂಬ ಹೆಸರಿಡಲಾಗಿದೆ ಎಂದೂ ಪ್ರಧಾನಿ ಹೇಳಿದರು.

ಚಂದ್ರಯಾನದ ಯಶಸ್ಸಿನಿಂದ ದೊರೆತ ಉತ್ಸಾಹವನ್ನು ಯುವಕರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಬಳಸಬೇಕಿದೆ. ಹೊಸ ಪೀಳಿಗೆಯನ್ನು ವಿಜ್ಞಾನದತ್ತ ಸೆಳೆಯಬೇಕಿದೆ ಎಂದು ಪ್ರಧಾನಿ ಹೇಳಿದರು.

ಭಾರತ 2047ರಲ್ಲಿ ಅಭಿವೃದ್ಧಿ ಹೊಂದಿದ ದೇಶವಾಗುವ ಕನಸು ಸಾಕಾರಗೊಳಿಸಲು ನಾವು ಹೆಚ್ಚಿನ ಬಲದೊಂದಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಹಾದಿಯಲ್ಲಿ ಸಾಗಬೇಕಿದೆ ಎಂದೂ ಮೋದಿ ಹೇಳಿದರು.

# ಜಾತಿ ಬಗ್ಗೆ ಕೀಳರಿಮೆ ಬೇಡ

## ಸವಿತಾ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕ್ರಮದಲ್ಲಿ ವಿಶ್ವನಾಥ್ ಸ್ವದೇಶಿ



ದಾವಣಗೆರೆ, ಆ. 26- ಕಾಡಿನ ರಾಜ ಎಂದು ಸಿಂಹಕ್ಕೆ ಸುಮ್ಮನೆ ಕಿರೀಟ ಇಟ್ಟು ಗೌರವಿಸುವುದಿಲ್ಲ. ಕಾಡನ್ನು ಆಳಬಲ್ಲ ಶಕ್ತಿ ಸಿಂಹಕ್ಕೆ ಇರುವುದರಿಂದಲೇ ಅದು ಗೌರವಕ್ಕೆ ಪಾತ್ರವಾಗುತ್ತದೆ. ಹಾಗೆಯೇ ಸವಿತಾ ಸಮಾಜ ದವರು ಕೀಳರಿಮೆ ತೊರೆದು ಸಂಘಟಿತರಾಗಿ ಘರ್ಜಿಸಿದಾಗ ಗೌರವ ತಾನಾಗಿಯೇ ದೊರೆಯುತ್ತದೆ ಎಂದು ರಾಜ್ಯ ಸವಿತಾ ಸಮಾಜದ ಮುಖಂಡ ವಿಶ್ವನಾಥ್ ಸ್ವದೇಶಿ ಕರೆ ನೀಡಿದರು.

ನಗರದ ಚನ್ನಗಿರಿ ಕೇಶವಮೂರ್ತಿ ರೋಟರಿ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಸವಿತಾ ಕ್ಷೇಮಾಭಿವೃದ್ಧಿ ಸಂಘದ 10ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ ಮಹಾಪದ್ಮನಂದನನ ವಂಶಸ್ಥರು, ಅವಧೂತರ ಪರಂಪರೆಯವರೂ ಆದ ನಮ್ಮದು ಶ್ರೇಷ್ಠ ಸಮಾಜ. ಈ ಸಮಾಜದ ಬಗ್ಗೆ ಕೀಳರಿಮೆ ಬೇಡ. ನಮ್ಮ ಜಾತಿಯ ಬಗ್ಗೆ ಪ್ರತಿಯೊಬ್ಬರೂ ಹೆಮ್ಮೆಯಿಂದ ಹೇಳುವಂತಾಗಬೇಕು ಎಂದು ಕಿವಿ ಮಾತು ಹೇಳಿದು.

ನಮ್ಮ ಸಮಾಜವನ್ನು ಗುರುತಿಸಿಕೊಳ್ಳದ ಪರಿಣಾಮ ಇಂದು ನಾವು ಅಲ್ಪಸಂಖ್ಯಾತರಾಗಿದ್ದೇವೆ. ನಮ್ಮ ವ್ಯಕ್ತಿತ್ವದಿಂದ ಗೌರವ ಸಿಗುತ್ತದೆಯೇ ಹೊರತು ಜಾತಿಯಿಂದಲ್ಲ. ಈ ಹಿನ್ನೆಲೆಯಲ್ಲಿ ಉತ್ತಮ ವ್ಯಕ್ತಿತ್ವದಿಂದ ಬದುಕು ರೂಪಿಸಿಕೊಳ್ಳುವಂತೆ ಹೇಳಿದರು.

ಮೂಲತಃ ನಾವೆಲ್ಲಾ ರೈತ ಜೀವಿಗಳು. ಕುಂಬಾರ, ಬಡಗಿ, ಕ್ಷೌರಿಕ ಹೀಗೆ ಒಬ್ಬೊಬ್ಬರೂ ಒಂದೊಂದು ಉಪ ವೃತ್ತಿಗಳನ್ನು ಆರಂಭಿಸಿದರು. ಈ ರೀತಿ ಉಪ ವೃತ್ತಿ ಮಾಡುವರಿಗೆ ಬೆಳೆದ ಬೆಳೆಯಲ್ಲಿಯೇ ಒಂದಿಷ್ಟು ಭಾಗ ನೀಡಲಾಗುತ್ತಿತ್ತು. ಯಾವಾಗ ವೃತ್ತಿಗೆ ಹಣ ನೀಡಲು ಆರಂಭವಾಯಿತೋ ಆಗ ವೃತ್ತಿಗಳನ್ನು ಜಾತಿಗಳಿಂದ ಗುರುತಿಸಲು ಆರಂಭಿಸಲಾಯಿತು. ಈ ಜಾತಿ ಪರಂಪರೆಯನ್ನು ಹುಟ್ಟುಹಾಕಿದ್ದೇ ವಿದೇಶಿಗರು ಎಂದು ವಿವರಿಸಿದರು.

ಮುಂದಿನ ದಿನಗಳಲ್ಲಿ ಡಾಕ್ಟರ್ ಜಾತಿ, ಇಂಜಿನಿಯರ್ ಜಾತಿ, ವಕೀಲರ ವೃತ್ತಿಯೂ ಜಾತಿಯಾದರೆ ಆಶ್ಚರ್ಯವಿಲ್ಲ ಎಂದ ಅವರು, ಜಾತಿಗೆ ಪ್ರಾಮುಖ್ಯತೆ ನೀಡುವುದು ಬೇಡ ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಪಿ.ಬಿ. ವೆಂಕಟಾಚಲಪತಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕಳೆದ ಹತ್ತು ವರ್ಷಗಳ ಹಿಂದೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ನಾಲ್ಕು ಜನರಿಂದ ಆರಂಭವಾದ ಈ ಸಂಘ ಎಲ್ಲರ ಸಹಕಾರದಿಂದ ಇಂದು ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ. ಅನೇಕ ಜನಪರ ಕಾರ್ಯಕ್ರಮಗಳನ್ನು ನಡೆಸುತ್ತಿದೆ ಎಂದು ಹೇಳಿದರು.

ಸವಿತಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ಜಿ. ನಾಗರಾಜ ಅಧ್ಯಕ್ಷತೆ ವಹಿಸಿದ್ದರು. ಉತ್ತರ ಪ್ರದೇಶದ ಅವದೇಶ ಕುಮಾರ್ ನಂದಾ, ಕರ್ನಾಟಕ ನಾಟಕ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಭೀಮಸೇನ, ರಾಜ್ಯ ಸವಿತಾ ಸಮಾಜದ ಮುಖಂಡ ಕೃಷ್ಣಪ್ಪ ಎಂ.ದಾಸರಹಳ್ಳಿ, ಶಿಲ್ಪಿ ವಿಶ್ವಾಸ್ ಎಂ.ವಿ.ಎ., ಸಂಘದ ಜಿಲ್ಲಾಧ್ಯಕ್ಷ ಬಾಲರಾಜ್ ಉಪ್ಪಾಲ, ತಾಲ್ಲೂಕು ಅಧ್ಯಕ್ಷರುಗಳಾದ ರಾಜು ಗೌಡರ್, ನಾಗರಾಜ್ ಸಾಸ್ವೇಹಳ್ಳಿ, ಬಾಲರಾಜ್, ಬಿ.ಲಿಂಗಪ್ಪ ಇತರರು ಉಪಸ್ಥಿತರಿದ್ದರು. ಎನ್. ಮಂಜುನಾಥ್ ಪ್ರಾರ್ಥಿಸಿದರು. ರಾಜಮೋಹನ್ ಎನ್.ಆರ್. ಸ್ವಾಗತಿಸಿದರು.


# ನೀರಿನ ಮಿತ ಬಳಕೆ, ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

ಜಗಳೂರು, ಆ.26- ನೀರಿನ ಮಿತ ಬಳಕೆ ಮತ್ತು ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಬೇಕು ಎಂದು ಶಾಸಕ ಬಿ.ದೇವೇಂದ್ರಪ್ಪ ಕರೆ ನೀಡಿದರು.

ಪಟ್ಟಣದ ಹಳೇಬಸ್ ನಿಲ್ದಾಣದ ಬಳಿ "ಅಟಲ್ ಭೂ ಜಲಯೋಜನೆ" ಕಲಾ ತಂಡದ ಜನಜಾಗೃತಿ ಜಾಥಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಅಂತರ್ಜಲ ಹೆಚ್ಚಳಕ್ಕೆ ಅಟಲ್ ಭೂ ಜಲ ಯೋಜನೆ ಸಹಕಾರಿಯಾಗಲಿದೆ. ಮಳೆನೀರನ್ನು ಸಂಗ್ರಹಣೆ ಮಾಡಿ ಮಿತವಾಗಿ ಬಳಕೆ ಮಾಡಬೇಕು. ತಾಲ್ಲೂಕು ಕಳೆದ ವರ್ಷ ಅತಿವೃಷ್ಟಿಗೆ ತುತ್ತಾಗಿ ಹಳ್ಳಕೊಳ್ಳಗಳು ಭರ್ತಿಯಾಗಿ ಬೆಳೆ ನಾಶವಾಗಿದ್ದವು. ಪ್ರಸಕ್ತ ಸಾಲಿನಲ್ಲಿ ಸರಿಯಾಗಿ ಮಳೆ ಬೀಳದೆ ಮುಂಗಾರು ಬೆಳೆಗಳು ಬಾಡುತ್ತಿವೆ. ರೈತರು ಸಂಕಷ್ಟದಲ್ಲಿದ್ದಾರೆ. ಜನ ಜಾನುವಾರುಗಳು ಕುಡಿಯುವ ನೀರಿಗೂ ಹಾಹಾಕಾರ ಉಂಟಾಗುವ ಭೀತಿ ಎದುರಾಗಿದೆ ಎಂದು ಶಾಸಕರು ಆತಂಕ ವ್ಯಕ್ತಪಡಿಸಿದರು.

ಪ್ರಕೃತಿಯಲ್ಲಿ ನೀರು, ಗಾಳಿ, ಬೆಳಕು ದೇವರು ಕೊಟ್ಟ ಭಿಕ್ಷೆಯಾಗಿದೆ. ಕೋವಿಡ್ ಸಂದರ್ಭದಲ್ಲಿ ಆಮ್ಲಜನಕಕ್ಕೂ ಪರದಾಡುವಾಗ ಪರಿಸರದ ಮಹತ್ವ ಅರಿವಾಗಿದೆ. ಪ್ರಕೃತಿ ವಿನಾಶ ಜೀವ ಸಂಕುಲಕ್ಕೆ ಆಪತ್ತು. ಪ್ರಕೃತಿ ಉಳಿವಿಗಾಗಿ ನಾವೆಲ್ಲರೂ ಸಂಕಲ್ಪ ಮಾಡಬೇಕು ಎಂದರು. ಕಲಾತಂಡದಿಂದ ನೀರಿನ ಮಿತಬಳಕೆ ಕುರಿತು ಜನ ಜಾಗೃತಿ ಮೂಡಿಸಲಾಗುತ್ತಿದೆ. ಸರ್ಕಾರದ ಯೋಜನೆಗಳ ಮಹತ್ವ, ಅನುಷ್ಠಾನ ಕುರಿತು ಮಾಹಿತಿ ತಿಳಿದುಕೊಳ್ಳಬೇಕು ಎಂದರು.



**ಜಗಳೂರು ಶಾಸಕ ಬಿ. ದೇವೇಂದ್ರಪ್ಪ**

ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಷಂಷೀರ್ ಅಹಮದ್, ಡಿಪಿಎಂ ನೋಡಲ್ ಅಧಿಕಾರಿ ಆರ್.ಬಸವರಾಜ್, ಪ.ಪಂ ಸದಸ್ಯರಾದ ರಮೇಶ್ ರೆಡ್ಡಿ, ಶಕೀಲ್ ಅಹಮ್ಮದ್ ಮುಖಂಡರಾದ ಕಲ್ಲೇಶ್ ರಾಜ್ ಪಟೇಲ್, ಅಹಮ್ಮದ್ ಅಲಿ, ಓಮಣ್ಣ, ಶಂಭುಲಿಂಗಪ್ಪ, ಮಾಳಮ್ಮನಹಳ್ಳಿ ವೆಂಕಟೇಶ್, ಬಿ. ಮಹೇಶ್ವರಪ್ಪ, ಕೃಷಿ ಇಲಾಖೆ ಅಧಿಕಾರಿ ಮಿಥುನ್ ಕಿಮಾವತ್, ನೀರಾವರಿ ಇಲಾಖೆಯ ಚಂದ್ರಗೌಡ, ಶ್ವೇತಾ ಕೆ.ಎಸ್., ಅರ್ಪಿತ ಎಸ್.ಆರ್, ಯಶ್ವಂತ್, ಮಂಜುನಾಥ್ ಮುಂತಾದವರು ಇದ್ದರು.

## ಸಮ್ಮತಿ ವಯಸ್ಸು ಇಳಿಕೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ

ನವದೆಹಲಿ, ಆ. 26 - ಸಮ್ಮತಿಯ ವಯಸ್ಸನ್ನು ಇಳಿಕೆ ಮಾಡುವುದರಿಂದ ಲೈಂಗಿಕ ಪೀಡನೆಗೆ ಸಿಗುವ ಮಕ್ಕಳ ಹಿತಕ್ಕೆ ಧಕ್ಕೆಯಾಗುತ್ತದೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರೇತರ ಸಂಘಟನೆಯೊಂದು ಅರ್ಜಿ ದಾಖಲಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠ ಅರ್ಜಿಯ ವಿಚಾರಣೆ ನಡೆಸುತ್ತಿದ್ದು, ಕೇಂದ್ರ ಸರ್ಕಾರಕ್ಕೆ ನೋಟಿಸ್ ಕಳಿಸಿದೆ.

ಅಪ್ರಾಪ್ತ ಮುಸ್ಲಿಂ ಬಾಲಕಿ ತಾನು ಬಯಸಿದ ವ್ಯಕ್ತಿಯ ಜೊತೆ ಮದುವೆಯಾಗಬಹುದು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಕಳೆದ ವರ್ಷ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ ಮಕ್ಕಳ ಹಕ್ಕುಗಳ ರಾಷ್ಟ್ರೀಯ ಆಯೋಗ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಈ ನಡುವೆ ಪಚಪನ್ ಬಚಾವೋ ಆಂದೋಲನವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಪೋಕ್ಸೋ ಕಾಯ್ದೆಯಡಿ ಅಪ್ರಾಪ್ತರ ಕುರಿತು ಇರುವ ಅಂಶಗಳನ್ನು ಬದಲಿಸಬಾರದು ಎಂದು ಕೇಳಿದೆ. ಪೋಕ್ಸೋ ಕಾಯ್ದೆಯ ಅನ್ವಯ ಅಪ್ರಾಪ್ತರು ಸಂಬಂಧಕ್ಕೆ ಸಹಮತ ನೀಡುವುದಕ್ಕೆ ಮಾನ್ಯತೆ ಇಲ್ಲ. ಅಪ್ರಾಪ್ತರ ಸಮ್ಮತಿಯಿಂದ ಸಂಬಂಧ ಬೆಳೆಸಿದರೂ ಶಿಕ್ಷೆಯಾಗುತ್ತದೆ.

# ಕರ್ತವ್ಯ ಪ್ರಜ್ಞೆ ಹಾಗೂ ಧನ್ಯತೆ ಇರಲಿ

## ವಕೀಲರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಠ

ಬೆಂಗಳೂರು, ಆ 26- ಸರ್ಕಾರಿ ವಕೀಲರು ಮತ್ತು ಅಧಿಕಾರಿಗಳ ವೈಫಲ್ಯದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ವ್ಯಾಜ್ಯ ಸಣ್ಣದಿರಲಿ, ದೊಡ್ಡದಿರಲಿ ಅದನ್ನು ಗಂಭೀರವಾಗಿ ಪರಿಗಣಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಕೀಲರು ಹೋಂ ವರ್ಕ್ ಮಾಡಬೇಕು. ನಮಗೆ ಹಣ ಕೊಡುವುದು ಜನರು. ಜನರ ಹಣದಲ್ಲಿ ನಮಗೆ ಸವಲತ್ತುಗಳು ಸಿಗುತ್ತಿವೆ. ಈ ಬಗ್ಗೆ ನಮಗೆ ಪ್ರಜ್ಞೆ ಮತ್ತು ಕರ್ತವ್ಯ ಪ್ರಜ್ಞೆ ಹಾಗೂ ಧನ್ಯತೆ ಇರಬೇಕು ಎಂದರು.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ ಹಾಗೂ ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಸಹಯೋಗದಲ್ಲಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಕರ್ನಾಟಕ ಸರ್ಕಾರಿ ವ್ಯಾಜ್ಯ ನಿರ್ವಹಣಾ ಅಧಿನಿಯಮ-2023ರ ಸಭೆಯಲ್ಲಿ ಮಾತನಾಡಿದ ಅವರು, ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರಾಗಿದ್ದು ಪರಿಣಾಮಕಾರಿಯಾಗಿ ಜಾರಿಯಾಗಬೇಕು ಎಂದು ಹೇಳಿದರು.

ಸರ್ಕಾರಿ ವಕೀಲರಿಗೆ ಸರ್ಕಾರದ ಕೇಸು ಎಂದರೆ ಅಸಡ್ಡೆ ಇರಬಾರದು. ಸರ್ಕಾರದ ಕೇಸುಗಳು ಎಂದರೆ ಜನರ ಕೇಸುಗಳು. ಜನರಿಗೆ ನ್ಯಾಯ ಸಿಗುವ ಪ್ರಮಾಣ ಇನ್ನೂ ಹೆಚ್ಚಾಗಬೇಕು. ಬಡವರಿಗೆ ಮೇಲಿನ ನ್ಯಾಯಾಲಯಗಳಿಗೆ ಹೋಗುವ ಶಕ್ತಿ ಇರುವುದಿಲ್ಲ. ಬಡವರಿಗೆ ನ್ಯಾಯ ಸಿಗದಿದ್ದರೆ ಸರ್ಕಾರಿ ವಕೀಲರನ್ನು ನೇಮಿಸಿಕೊಂಡಿದ್ದು ಸಾರ್ಥಕ ಆಗುವುದಿಲ್ಲ ಎಂದರು.

ಕೆಲವು ನ್ಯಾಯಾಧೀಶರು ಮುಖ ನೋಡಿ ಮಣೆ ಹಾಕುತ್ತಾರೆ ಎನ್ನುವ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿದೆ. ಇದನ್ನು ಎಲ್ಲರೂ ಒಟ್ಟಾಗಿ ಅಳಿಸಬೇಕು. ಪ್ರಕರಣಗಳಲ್ಲಿ ಅನಗತ್ಯವಾಗಿ ದಿನಾಂಕ ಪಡೆಯಬಾರದು. ಕೇಸು ನಡೆಸಬೇಕು. ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಗಳಿಗೆ ಜಾಮೀನು ನೀಡುವುದನ್ನು ಪರಿಣಾಮಕಾರಿಯಾಗಿ ವಿರೋಧಿಸಬೇಕು. ಅಲ್ಲೇ ನಿಮ್ಮಗಳ ಅರ್ಹತೆ ಗೊತ್ತಾಗುತ್ತದೆ ಎಂದು ಸೂಚ್ಯವಾಗಿ ಮುಖ್ಯಮಂತ್ರಿಗಳು ಹೇಳಿದರು.




## ಬಗರ್ ಹುಕ್ಕುಂ ಸಾಗುವಳಿದಾರರಿಗೆ ವಿನಾಕಾರಣ ಕಿರುಕುಳ : ರೈತ ಸಂಘ ಆರೋಪ



**ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ ನೀರು ತಲುಪಿಸಲು ಜಿಲ್ಲಾಡಳಿತ ವಿಶೇಷ ನಿಗಾ ವಹಿಸಬೇಕು : ಬಲ್ಲೂರು ರವಿಕುಮಾರ್**

ಮಲೇಬೆನ್ನೂರು, ಆ.26- ಗೋಮಾಳ, ಸರ್ಕಾರಿ ಭೂಮಿ, ಅರಣ್ಯ ಪ್ರದೇಶದಲ್ಲಿ ಹಿಂದಿನಿಂದಲೂ ಭೂ ರಹಿತ ರೈತರು ಕೃಷಿ ಮಾಡುತ್ತಿದ್ದು, ಅಂತಹ ಬಡ ರೈತರು ಪಹಣಿ ನೀಡಲು ಅರ್ಜಿ ಸಲ್ಲಿಸಿದರೂ ಅಧಿಕಾರಿಗಳು ಸತಾಯಿಸುತ್ತಿದ್ದಾರೆ ಎಂದು ರಾಜ್ಯ ರೈತ ಸಂಘದ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ದೂರಿದರು.

ಅವರು ಬುಧವಾರ ಇಲ್ಲಿನ ನೀರಾವರಿ ಇಲಾಖೆ ಆವರಣದಲ್ಲಿ ನಡೆದ ಕೃಷಿ ಸಾಗುವಳಿದಾರರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಬಹರ್ ಹುಕುಂ ಸಾಗುವಳಿದಾರರಿಗೆ ವಿನಾ ಕಾರಣ ಕಿರುಕುಳ ನೀಡುವ ಅಧಿಕಾರಿಗಳ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದೆಂದು ರವಿಕುಮಾರ್ ಎಚ್ಚರಿಸಿದರು. ಜಿಲ್ಲೆಯ ಎಲ್ಲಾ ಕಡೆ ಬಿತ್ತನೆ ಮಾಡಲಾಗಿದ್ದ ಮೆಕ್ಕೆಜೋಳದ ಬೆಳೆ ಮಳೆ ಇಲ್ಲದೇ ಒಣಗಿ ಹೋಗಿದ್ದು, ಸರ್ಕಾರ ಕೂಡಲೇ ಅಂತಹ ರೈತರಿಗೆ ಪರಿಹಾರ ನೀಡಬೇಕು ಮತ್ತು ದಾವಣಗೆರೆ ಜಿಲ್ಲೆಯನ್ನು ಬರಪೀಡಿತ ಜಿಲ್ಲೆಯೆಂದು ಘೋಷಿಸಬೇಕು.

ಭದ್ರಾ ಅಚ್ಚುಕಟ್ಟಿನ ಕೊನೆ ಭಾಗದ ರೈತರಿಗೆ 100 ದಿನ ನೀರು ಒದಗಿಸಲು ಜಿಲ್ಲಾಡಳಿತ ವಿಶೇಷ ನಿಗಾವಹಿಸಬೇಕು ಮತ್ತು ಭೈರನಪಾದ ಏತ ನೀರಾವರಿ ಯೋಜನೆ ಜಾರಿಗೊಂಡರೆ, ಕೊನೆ ಭಾಗದ ರೈತರಿಗೆ ಅನುಕೂಲವಾಗಲಿದ್ದು, ಈ ಬಗ್ಗೆಯೂ ಜಿಲ್ಲಾಡಳಿತ ಸರ್ಕಾರಕ್ಕೆ ಪತ್ರ ಬರೆಯಬೇಕೆಂದು ರವಿಕುಮಾರ್ ಒತ್ತಾಯಿಸಿದರು.

ರೈತ ಸಂಘದ ಕೋಗಳಿ ಮಂಜುನಾಥ್, ಬೆಳಕೆರೆ ಬಸಣ್ಣ, ರೆಹಮಾನ್ ಸಾಬ್, ಹನುಮಂತಪ್ಪ, ಫೈಜುಲ್ಲಾ, ವಕೀಲ ಮಂಜುನಾಥ್ ಮತ್ತಿತರರು ಸಭೆಯಲ್ಲಿದ್ದರು.



# ಬ್ಯಾರಿಕೇಡ್ ಹಿಂದೆ ಮುಖಂಡರು

## ಕಾಂಗ್ರೆಸ್-ಬಿಜೆಪಿ ಮುಖಂಡರು ಪರಸ್ಪರ ಕೆಸರೆರೆಚಾಟ



ಬೆಂಗಳೂರು, ಆ. 26- ಚಂದ್ರಯಾನ-3 ಯಶಸ್ವಿಗಾಗಿ ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡಿದ್ದ ವಿಚಾರ ಆಡಳಿತ ಪಕ್ಷ ಕಾಂಗ್ರೆಸ್ ಮತ್ತು ಪ್ರತಿ ಪಕ್ಷ ಬಿಜೆಪಿ ನಡುವೆ ಕೆಸರೆರಚಾಟಕ್ಕೆ ಎಡೆಮಾಡಿಕೊಟ್ಟಿದೆ.

ಬೆಂಗಳೂರಿಗೆ ಇಂದು ಆಗಮಿಸಿದ ಪ್ರಧಾನಿ ಅವರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಇಸ್ರೋ ಕೇಂದ್ರವಿರುವ ಪೀಣ್ಯದವರೆಗೂ ತೆರೆದ ಕಾರಿನಲ್ಲಿ ತೆರಳಿದರು. ಈ ಸಂದರ್ಭದಲ್ಲಿ ರಸ್ತೆ ಇಕ್ಕೆಲಗಳಲ್ಲಿ ನೆರೆದಿದ್ದ ಜನರತ್ತ ಕೈ ಬೀಸುತ್ತಾ ಪ್ರಧಾನಿ ಸಾಗಿದರು.

ಬಿಜೆಪಿ ಅಧ್ಯಕ್ಷ ನಳೀನ್ ಕುಮಾರ್ ಕಟೀಲು, ಮಾಜಿ ಸಚಿವರಾದ ಮುನಿರತ್ನ, ಗೋಪಾಲಯ್ಯ, ಸಂಸದ ತೇಜಸ್ವಿ ಸೂರ್ಯ ಶಾಸಕ ಮುನಿರಾಜು ಸೇರಿದಂತೆ ಹಲವು ಬಿಜೆಪಿ ನಾಯಕರು ಸಾಮಾನ್ಯರಂತೆ ಜನತೆಯ ಜೊತೆಗೆ ಬ್ಯಾರಿಕೇಡ್ ಹಿಂದೆ ಸಾಲಿನಲ್ಲಿ ನಿಂತು ಪ್ರಧಾನಿಯತ್ತ ಕೈಬೀಸಿ ಹರ್ಷ ವ್ಯಕ್ತಪಡಿಸಿದರು.

ಈ ವಿಚಾರವನ್ನು ಮುಂದಿಟ್ಟುಕೊಂಡು ಟೀಕೆ ಮಾಡಿರುವ ಕಾಂಗ್ರೆಸ್ ವಿಧಾನಸಭಾ ಚುನಾವಣೆಯಲ್ಲಿ ಸೋತ ಬಳಿಕ ರಾಜ್ಯ ಬಿಜೆಪಿ ನಾಯಕರನ್ನು ಅವರ ಹೈಕಮಾಂಡ್ ಹತ್ತಿರಕ್ಕೂ ಸೇರಿಸದೆ ಬೀದಿಪಾಲು ಮಾಡಿದ್ದಾರೆ ಎಂಬುದಕ್ಕೆ ಇಂದಿನ ಘಟನೆಯೇ ಸಾಕ್ಷಿ ಎಂದು ಫೋಟೋ, ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕಿ ಟೀಕಿಸಿದೆ.

ಈ ಟೀಕೆಗೆ ಎದಿರೇಟು ನೀಡಿರುವ ರಾಜ್ಯ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿಯವರು ಬೆಂಗಳೂರಿಗೆ ಬಂದಿದ್ದು ಚಂದ್ರಯಾನದ ಅಭೂತಪೂರ್ವ ಯಶಸ್ಸಿಗಾಗಿ ಶ್ರಮಿಸಿದ ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸುವುದಕ್ಕೇ ಹೊರತು ಪಕ್ಷದ ಸಭೆಗಲ್ಲ ಎಂದು ಸಾಮಾಜಿಕ ಜಾಲ ತಾಣದ ಮೂಲಕವೇ ತಿರುಗೇಟು ನೀಡಿದೆ.

ನಮ್ಮ ಪಕ್ಷದ ಪ್ರಮುಖರು ಜನಸಾಮಾನ್ಯರಂತೆ ನಿಂತು ಅವರ ಸಂತಸದಲ್ಲಿ ಪಾಲ್ಗೊಂಡು ಅವರೊಡನೆ ತಮ್ಮ ಅಭಿಮಾನ ಪ್ರದರ್ಶಿಸಿರುವುದರಲ್ಲಿ ಹುಳುಕು ಹುಡುಕಲೆತ್ನಿಸಿರುವ ನಿಮಗೆ ಕಾಮಾಲೆಯಿಂದ ಏನೋ ಕಾಯಿಲೆ ಇರಬಹುದು ಎಂದು ಆರೋಪಿಸಿದೆ.


ಕಾಮಾಲೆ ಕಣ್ಣಿನವರಿಗೆ ಕಾಣೋದೆಲ್ಲಾ ಹಳದಿಯೇ ಎಂಬಂತೆ ಗಾಂಧಿ ಕುಟುಂಬದ ಜೀತಕ್ಕೆ ಬಿದ್ದವರಂತೆ ಸೇವೆ ಮಾಡುವ ಕಾಂಗ್ರೆಸ್ಸಿಗರಿಗೆ ಪ್ರಧಾನಮಂತ್ರಿಗಳ ಅಧಿಕೃತ ಸರ್ಕಾರಿ ಭೇಟಿಗೂ, ಅನೌಪಚಾರಿಕ ಭೇಟಿಗೂ ವ್ಯತ್ಯಾಸ ತಿಳಿದಿಲ್ಲ ಎಂದು ಎಕ್ಸ್‌ನಲ್ಲಿ ವ್ಯಂಗ್ಯವಾಡಿದೆ.

ಬೆಂಗಳೂರಿಗೆ ಆಗಮಿಸಿದ ಪ್ರಧಾನಮಂತ್ರಿಗಳನ್ನು ಸ್ವಾಗತಿಸಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳಾಗಲೀ, ಸರ್ಕಾರದ ಪ್ರತಿನಿಧಿಗಳಾಗಲೀ ತೆರಳಿಲ್ಲ. ರಾಜ್ಯ ಸರ್ಕಾರ ಶಿಷ್ಟಾಚಾರ ಪಾಲನೆ ಉಲ್ಲಂಘಿಸಿದೆ ಎಂದು ಮಾಜಿ ಸಚಿವ ಆರ್.ಅಶೋಕ್ ಆರೋಪಿಸಿದ್ದಾರೆ.

ಇದಕ್ಕೆ ತಿರುಗೇಟು ನೀಡಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ಕಚೇರಿ ಆರ್. ಅಶೋಕ್ ಅವರನ್ನು ಲೆಕ್ಕಕ್ಕೇ ಇಟ್ಟುಕೊಂಡಿಲ್ಲ ಎಂಬುದಕ್ಕೆ ಅವರ ಮಾತೇ ಸಾಕ್ಷಿ. ನಾವು ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಸಿದ್ಧವಿದ್ದೆವು. ಆದರೆ ಪ್ರಧಾನಮಂತ್ರಿಗಳ ಕಚೇರಿಯ ಸಂದೇಶ ಗೌರವಿಸಿ, ಸ್ವಾಗತಕ್ಕೆ ತೆರಳಲಿಲ್ಲ. ಈ ವಿಚಾರದ ಬಗ್ಗೆ ಪ್ರಧಾನಿ ಕಚೇರಿಯಿಂದ ಮಾಹಿತಿ ಪಡೆದುಕೊಂಡು ನಂತರ ಅಶೋಕ್ ಮಾತನಾಡಲಿ ಎಂದರು.

## ಪದವಾಣಿ-77

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

| | |
|---|---|
| 1) ತುಂಬಾ ಸಿಹಿಯಾದುದು | 5 |
| 3) ಮುಖ ತಿರುಗಿದೆ | 3 |
| 4) ವಿಧ ವಿಧವಾಗಿ ಮಾಡಿದ ಹಾಸ್ಯ | 3 |
| 6) ಒರಿಸ್ಸಾದಲ್ಲಿ ಹರಿಯುವ ದೊಡ್ಡಹೊಳೆ | 4 |
| 8) ಓಟು ಹಾಕುವುದು | 4 |
| 9) ಸಂಸ್ಕೃತದಲ್ಲಿ ಬೆಣ್ಣೆ | 4 |
| 11) ಕ್ಷುದ್ರ ಲೋಹಗಳನ್ನು ಚಿನ್ನವಾಗಿಸುವ ವಿದ್ಯೆ | 4 |
| 14) ದಾಡಿಮ ಫಲ | 3 |
| 15) ಅವಸರ ಹೀಗೆ ಆಗಿದೆ | 3 |
| 16) ರಾಖೀ ಕಟ್ಟುವುದು | 5 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಅವನಿಗಾದ ಅಗೌರವ | 4 |
| 2) ಈತ ಸೂರ್ಯಪುತ್ರ | 4 |
| 3) ಒಂಬತ್ತನೇಯ | 3 |
| 5) ವನದಲ್ಲಿ ಸಿಕ್ಕ ಸುವಾಸನೆಯ ಸಸ್ಯ | 3 |
| 7) ಕ್ಷಿತಿಜ-ಪರ್ಯಾಯ ಪದ | 3 |
| 8) ಮರದ ನಡುವೆ ಇರುವ ನವಿಲು | 3 |
| 9) ಭಾರತದ ಒಂದು ಪವಿತ್ರ ನದಿ | 3 |
| 10) ನೀಲಿ ಬಣ್ಣದ ಆಕಾಶ | 4 |
| 12) ನಾಲ್ಕಕ್ಷರದ ನೆಮ್ಮದಿ | 4 |
| 13) ಶೋಷಣೆಗೆ ಒಳಗಾದವನು | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 76 ರ ಉತ್ತರಗಳು :**

**ಎಡದಿಂದ ಬಲಕ್ಕೆ :** 1) ಅವಯವ 3) ವಾದ 4) ಯಮಯಾತನೆ 6) ದಕ (ಕದ) 8) ವಿಧುರ 10) ಚಕ್ರ 12) ಸಹಾಯಧನ 14) ಖಾದಿ 15) ನಳಪಾಕ

**ಮೇಲಿನಿಂದ ಕೆಳಕ್ಕೆ :** 1) ಅರವಿಂದ 2) ವಲಯ 3) ವಾಸನೆ 5) ಯಾಮೀರ 7) ಕತ್ತೆ 8) ವಿದಾಯ 9) ಕುಂಚ 11) ಕ್ರಮೇಲಕ 12) ಸನಾದಿ 13) ನಳಿನ.

# 'ಶಿವ ಶಕ್ತಿ' ಹೆಸರಿಗೆ ಅಲ್ವಿ ಆಕ್ರೋಶ

**ಜವಾಹರ್ ಪಾಯಿಂಟ್‌ಗೆ ಸಮರ್ಥನೆ**

ನವದೆಹಲಿ, ಆ. 27 - ಚಂದ್ರಯಾನ 3ರ ವಿಕ್ರಮ್ ಲ್ಯಾಂಡರ್ ಇಳಿದ ಸ್ಥಳಕ್ಕೆ ಶಿವ ಶಕ್ತಿ ಎಂಬ ಹೆಸರಿಟ್ಟಿರುವುದಕ್ಕೆ ಕಾಂಗ್ರೆಸ್ ನಾಯಕ ರಶೀದ್ ಅಲ್ವಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಹೆಸರಿಟ್ಟಿರುವ ಸ್ಥಳಕ್ಕೆ ನಾವು ಮಾಲೀಕರಲ್ಲ. ಈ ರೀತಿ ವರ್ತಿಸುವುದು ಬಿಜೆಪಿಯ ಅಭ್ಯಾಸವಾಗಿದೆ. ಅಧಿಕಾರಕ್ಕೆ ಬಂದ ನಂತರದಿಂದಲೂ ನಗರ, ರಸ್ತೆಗಳ ಹೆಸರು ಬದಲಿಸುತ್ತಿದ್ದರು. ಈಗ ಚಂದ್ರನವರೆಗೆ ತಲುಪಿದೆ ಎಂದು ಅಲ್ವಿ ಹೇಳಿದ್ದಾರೆ.

ಚಂದ್ರನ ಮೇಲ್ಮೈಗೆ ಹೆಸರಿಡುವ ಹಕ್ಕನ್ನು ನರೇಂದ್ರ ಮೋದಿಗೆ ನೀಡಿದವರು ಯಾರು? ಇದು ಹಾಸ್ಯಾಸ್ಪದ. ಈ ನಾಮಕರಣದ ನಂತರ ಇಡೀ ಜಗತ್ತು ನಮ್ಮನ್ನು ನೋಡಿ ನಗುತ್ತದೆ ಎಂದೂ ಅವರು ಹೇಳಿದ್ದಾರೆ.

ಯುಪಿಎ ಆಡಳಿತದ ಅವಧಿಯಲ್ಲಿ ಚಂದ್ರಯಾನ - 1, ಚಂದ್ರನ ಮೇಲೆ ಅಪ್ಪಳಿಸಿದ ಸ್ಥಳಕ್ಕೆ ಜವಾಹರ್ ಪಾಯಿಂಟ್ ಎಂಬ ಹೆಸರಿಡಲಾಗಿತ್ತು.

ಇದನ್ನು ಸಮರ್ಥಿಸಿಕೊಂಡಿರುವ ಅಲ್ವಿ, ನೆಹರೂ ಅವರನ್ನು ಬೇರೆಯವರಿಗೆ ಹೋಲಿಸಲು ಸಾಧ್ಯವಿಲ್ಲ. ಇವತ್ತು ಇಸ್ರೋ ಏನಾಗಿದೆಯೋ ಅದಕ್ಕೆ ಜವಾಹರಲಾಲ್ ನೆಹರು ಕಾರಣದಿಂದ ಎಂದರು.

# ತನಿಖೆಗೆ ಎರಡು ಆಯೋಗ ರಚನೆ

**(1ನೇ ಪುಟದಿಂದ)** ಹೆಚ್ಚಿನ ಪ್ರಮಾಣದಲ್ಲಿ ಕಾಮಗಾರಿಗಳನ್ನು ನಡೆಸುವ ಇಲಾಖೆಗಳಾದ ಲೋಕೋಪಯೋಗಿ, ಜಲಸಂಪನ್ಮೂಲ, ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಸಣ್ಣ ನೀರಾವರಿ ಇಲಾಖೆಗಳಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರಗಳ ಕುರಿತು ಸ್ಥಳ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ವಿವರವಾದ ತನಿಖೆ ನಡೆಸಿ, ಲೋಪದೋಷಗಳ ಮಾಹಿತಿ ಹಾಗೂ ಅದಕ್ಕೆ ಕಾರಣರಾದ ಆರೋಪಿಗಳನ್ನು ಪತ್ತೆ ಮಾಡಿ ಸಂಪೂರ್ಣ ವರದಿಯನ್ನು ಮೂರು ತಿಂಗಳ ಒಳಗೆ ಸಲ್ಲಿಸಬೇಕು ಎಂದೂ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

# ಪಾಕಿಸ್ತಾನದ ಗೂಢಚಾರಿಯ ಬಂಧನ

ಕೊಲ್ಕೊತಾ, ಆ. 26 - ಪಾಕಿಸ್ತಾನದ ಗೂಢಚಾರಿ ಯಾಗಿದ್ದ 36 ವರ್ಷದ ವ್ಯಕ್ತಿಯನ್ನು ಕೊಲ್ಕೊತಾದಲ್ಲಿ ಬಂಧಿಸಲಾಗಿದ್ದು, ಆತನಿಂದ ಹಲವಾರು ಸೂಕ್ಷ್ಮ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸುಳಿವಿನ ಮೇಲೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಹೌರಾದಲ್ಲಿರುವ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದರು. ಆರೋಪಿ ಬಿಹಾರದ ದರ್ಭಾಂಗ್ ಜಿಲ್ಲೆಯವನು.

ಈತ ಭಾರತದ ಸುರಕ್ಷತೆಗೆ ಧಕ್ಕೆ ತರುವ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿದ್ದ ಎಂದು ಪೊಲೀಸರು ಹೇಳಿದ್ದಾರೆ.

# ಲಾನ್ ಟೆನ್ನಿಸ್ ಪಂದ್ಯಾವಳಿ ತಂಡದ ಆಯ್ಕೆ

ದಾವಣಗೆರೆ, ಆ.26- ಅಖಿಲ ಭಾರತ ನಾಗರಿಕ ಸೇವಾ ಲಾನ್ ಟೆನ್ನಿಸ್ ಪಂದ್ಯಾವಳಿಗೆ ರಾಜ್ಯ ತಂಡದ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಇದೇ ದಿನಾಂಕ 30 ರಂದು ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ಶ್ರೀ ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದು. ಈ ಆಯ್ಕೆ ಪ್ರಕ್ರಿಯೆಯಲ್ಲಿ ಜಿಲ್ಲೆಯ ಸರ್ಕಾರಿ ನೌಕರರು ಭಾಗವಹಿಸಬಹುದು. ವಿವರಕ್ಕೆ ಸಂಪರ್ಕಿಸಿ : ಚಿನ್ನಪ್ಪ (9844173168).


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಮನೆ ಬಾಡಿಗೆಗೆ ಇದೆ**
2BHK ಸಸ್ಯಹಾರಿಗಳಿಗೆ ಮಾತ್ರ, ನಲ್ಲಿ, ಬೋರ್ ನೀರು ಇದೆ. 20×30, #696/19, ಶ್ರೀನಿವಾಸ ನಗರ, 10ನೇ ಕ್ರಾಸ್, ದಾವಣಗೆರೆ. ವಿಚಾರಿಸಿ
98800 68009

**ಮಳಿಗೆ ಬಾಡಿಗೆಗಿದೆ**
15×15 Sq.Feet ಅಳತೆಯ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 4ನೇ ಮುಖ್ಯರಸ್ತೆ ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ:
99649 32504

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಬಾಡಿಗೆಗೆ**
Ground floor, 2 BHK ಮನೆ, ಅಟ್ಯಾಚ್ ಬಾತ್‌ರೂಮ್ ಹೊಂದಿರುವ, ಮುನ್ಸಿಪಲ್ ಹಾಗೂ ಬೋರ್‌ವೆಲ್ ಸೌಕರ್ಯವಿರುವ ವಾಸ್ತು ಪ್ರಕಾರದ ಪೂರ್ವ ದಿಕ್ಕಿನ ಮನೆ. ಡೋ.ನಂ. 1830/41, LIC ಕಾಲೋನಿ, ವಿದ್ಯಾನಗರ, ನೂತನ ಕಾಲೇಜ್ ಹಿಂಭಾಗ, ದಾವಣಗೆರೆ. ಸಂಪರ್ಕಿಸಿ :
97405 43247

**ಸೈಟ್ ಮಾರಾಟಕ್ಕಿದೆ**
ಪಶ್ಚಿಮ ದಿಕ್ಕಿನ 30x50 ಅಳತೆಯ ಸೈಟ್ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಮಾರಾಟಕ್ಕಿದೆ, ಸಂಪರ್ಕಿಸಿ :
98446 55410
83106 43453

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**House For Rent**
3 BHK, Front of Vishweshwaraiah Park, 4th Main, 9th Cross, P.J. Extension, Davangere
Ph: 94823 51770

**ಮನೆ ಮಾರಾಟಕ್ಕಿದೆ**
ದಾವಣಗೆರೆ ಅಶೋಕ ನಗರ, ಕೊಂಡಜ್ಜಿ ರಸ್ತೆ, 19×40, ಉತ್ತರ ದಿಕ್ಕಿಗಿರುವ 2 ವರ್ಷದ ಮನೆ, ನೀರಿನ ಟ್ಯಾಂಕ್ ಹತ್ತಿರ, ರೆವಿನ್ಯೂ ಲ್ಯಾಂಡ್, ಕಾರ್ಪೊರೇಷನ್ ನೀರು ಹಾಗೂ ಬೋರ್‌ವೆಲ್ ನೀರಿನ ಸೌಕರ್ಯವಿರುವ ಇಂಡಿಪೆಂಡೆಂಟ್ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
ಮೊ. : 94816 29318

**SITE FOR RENT**
Commercial Place 11X30 Feet For Rent In Vidayanagara First Bus Stop. Contact :
90085 25105

**HOUSE FOR RENT**
2BHK
RTO / SP ಆಫೀಸ್ ಹತ್ತಿರ. ಬೋರ್ ಹಾಗು ಕಾರ್ಪೊರೇಷನ್ ನೀರಿನ ಸವಲತ್ತಿರುವ ಹೊಸ ಮನೆ ಬಾಡಿಗೆಗೆ ಸಂಪರ್ಕಿಸಿ
78297 09850

**ಮನೆ ಬಾಡಿಗೆ/ಲೀಜ್‌ಗಿದೆ**
#109/15, 1ನೇ ಮಹಡಿ, ಡಬಲ್ ಬೆಡ್ ರೂಂ ಮುನ್ಸಿಪಲ್ ಮತ್ತು ಬೋರ್ ನೀರಿನ ವ್ಯವಸ್ಥೆ ಇರುವ ಮನೆ ಇದೆ. ಎಪಿಎಂಸಿ ಲಿಂಕ್ ರಸ್ತೆ, ಮಹಾವೀರ ಕಲ್ಯಾಣ ಮಂಟಪ ರಸ್ತೆ ಹತ್ತಿರ, ದಾವಣಗೆರೆ.
9844969721, 9448366027

**ಖಾಲಿ ಜಾಗ ಬಾಡಿಗೆಗೆ ಇದೆ**
ದಾವಣಗೆರೆ ಪಿ.ಬಿ. ರಸ್ತೆ, ಸಬ್‌ರಿಜಿಸ್ಟ್ರಾರ್ ಆಫೀಸ್ ಎದುರು, #857/18, 7ನೇ 'ಬಿ' ಕ್ರಾಸ್‌ನಲ್ಲಿ 50×88=4400 ಚದುರಡಿಯ ಖಾಲಿ ಜಾಗ ಬಾಡಿಗೆಗೆ ಇದೆ ಸಂಪರ್ಕಿಸಿ :
63662 34939, 98444 20009

**ಇಂಡಸ್ಟ್ರಿ ಮಾರಾಟಕ್ಕಿದೆ**
ಹನಗವಾಡಿ ಕೈಗಾರಿಕಾ ಪ್ರದೇಶ, ಹರಿಹರ 110x100 ಫ್ಲಾಟ್‌ನಲ್ಲಿ 31x55 : ಹೋಂ ಇಂಡಸ್ಟ್ರಿಸ್ 10 HP ಪವರ್ ಬೋರ್‌ವೆಲ್ ನೀರಿನ ಸೌಲಭ್ಯವಿದೆ.
98445 46777

**SSLC/ PUC ಮುಗಿಸಿರುವ ಹುಡುಗಿಯರಿಗೆ**
**2 months FREE TRAINING**
ನೀಡಿ, ನಂತರ ನಾವೇ ಉದ್ಯೋಗ ಕೊಡುವೆವು.
ಮೊ : 91081 85926

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ 'ಸಿ' ಬ್ಲಾಕ್, 2 ಬೆಡ್ ರೂಂ ಮನೆ, 2 BHK 2 ನೇ ಮಹಡಿ ಮನೆ ಖಾಲಿ ಇದೆ.
83173 43604, 83103 56509

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಡಾಲರ್ಸ್‌ಕಾಲೋನಿ ಮತ್ತು ತರಳಬಾಳು ಬಡಾವಣೆಯಲ್ಲಿ 30x40, 30x55, 40x40, 30x50 40x30, 40x60
ಮೊ : 95385 65909

**ಮನೆ ಬಾಡಿಗೆಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ.
78997 60749, 99726 75759

**ಲಾರಿ ಡ್ರೈವರ್ ಬೇಕಾಗಿದ್ದಾರೆ**
ಐಗೂರಿನಲ್ಲಿರುವ ಫ್ಯಾಕ್ಟರಿಗೆ ಅನುಭವವುಳ್ಳ ಲಾರಿ ಡ್ರೈವರ್ ಹಾಗೂ ಐಟಿಐ ಫಿಟ್ಟರ್ ಆಗಿರುವ ಮೆಕ್ಯಾನಿಕ್ ಬೇಕಾಗಿದ್ದಾರೆ
99016-76700

**HOUSE FOR RENT**
3 Bed Room Independent House For Rent In Vinayaka Badavane, Vidya Nagara. Contact :
90085 25105

**ಮನೆ ಬಾಡಿಗೆಗೆ ಅಥವಾ ಲೀಸ್‌ಗೆ**
2BHK, 2nd floor ನಲ್ಲಿ ಕಾರ್ಪೊರೇಷನ್ ಮತ್ತು ಬೋರ್ ವೆಲ್ ನೀರು (24x7) ಕೆ.ಬಿ. ಬಡಾವಣೆ ತ್ರಿಶೂಲ್ ಕಾನ್ವೆಂಟ್ ಹತ್ತಿರ. (ಸಸ್ಯಹಾರಿಗಳಿಗೆ ಮಾತ್ರ)
97411 01041

**ಬಿಲ್ಡಿಂಗ್ ಮಾರಾಟಕ್ಕಿದೆ**
15x50 ಕೆ.ಆರ್. ರಸ್ತೆ, ಎಸ್.ಬಿ.ಐ. ಹತ್ತಿರ ಬಿಲ್ಡಿಂಗ್ ಮಾರಾಟಕ್ಕಿದೆ.
99014 05058

**ಕಮರ್ಷಿಯಲ್ ಜಾಗ ಬಾಡಿಗೆಗೆ ಇದೆ**
ದಾವಣಗೆರೆ ಪಿ.ಬಿ. ರಸ್ತೆ, ಸಬ್‌ರಿಜಿಸ್ಟ್ರಾರ್ ಆಫೀಸ್ ಎದುರು, #856/17, 7ನೇ 'ಬಿ' ಕ್ರಾಸ್‌ನಲ್ಲಿ ಆಫೀಸ್‌ಗೆ ಸೂಕ್ತವಾಗಿರುವ ಪೂರ್ವ ದಿಕ್ಕಿನ ಗ್ರೌಂಡ್ ಫ್ಲೋರ್-3200 Sq.ft. ಮೊದಲನೇ ಮಹಡಿ-3500 Sq.ft. ಜಾಗ ಬಾಡಿಗೆಗೆ ಇದೆ ಸಂಪರ್ಕಿಸಿ :
63662 34939, 98444 20009

**WANTED**
Accountant for Electronics Shop
BHERAV DISTRIBUTOR
Jaydev Circle Davangere
Minimum 2 year experience in Account handling. Boys only
Qualification : B.Com or MBA
97423-29043

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಪಿಯುಸಿ/ಡಿಗ್ರಿ ಮತ್ತು ಬೇಸಿಕ್ ಕಂಪ್ಯೂಟರ್ಸ್ ಆದ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ :
98861 78654

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಗ್ಯಾಸ್ ಗೀಜರ್**
Fully Automatic Rs. 2990/-
R.O. +UV ವಾಟರ್ ಫಿಲ್ಟರ್, 5490/-
ಸೇಲ್ಸ್ & ಸರ್ವೀಸ್‌ಗಾಗಿ ಸಂಪರ್ಕಿಸಿ :
ಮರುತ್ ಎಂಟರ್ ಪ್ರೈಸಸ್
ವೈಎಂಸಿ ಕಾಂಪ್ಲೆಕ್ಸ್, ಹದಡಿ ರಸ್ತೆ, ಸ್ಟೇಡಿಯಂ ಎದುರು, ದಾವಣಗೆರೆ.
98868 96574, 98458 67574

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**REQUIRED**
Security guards and bouncers required in Davangere and Chitradurga
81056 99985
89715 04492

**ಸೈಟ್ ಮಾರಾಟಕ್ಕೆ**
ಡಾಲರ್ಸ್ ಕಾಲೋನಿ (40x51) ಪಶ್ಚಿಮ, ಕುಂದುವಾಡ ಸೈಟ್ 44 (30x50) ಪಶ್ಚಿಮ-ನೈರುತ್ಯ ಮೂಲೆ & ಸೈಟ್ 43 (30x50) ಪಶ್ಚಿಮ (ಅಕ್ಕ-ಪಕ್ಕ)
ಫೋ. : 97404 47907

**ಬಾಡಿಗೆಗೆ ಇದೆ**
5 ಬೆಡ್‌ರೂಮ್ ಮನೆ ಖಾಲಿ ಇದೆ, ಡುಪ್ಲೆಕ್ಸ್ MCC 'B' Block (ಸಸ್ಯಹಾರಿಗಳಿಗೆ ಮಾತ್ರ) ಏಜೆಂಟ್ ಅಮರೇಶ್
98809 61339

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ದಂಪತಿ ಬೇಕಾಗಿದ್ದಾರೆ. ಸಂಬಳ 20,000 ರೂಂ ಉಚಿತ. ಸಂಪರ್ಕಿಸಿ :
97400 98047

**WANTED IMMEDIATELY**
BIKE RIDER JOB @ BANGALORE.
SALARY:- 16K PER MONTH + FOOD+ PETROL + ACCOMODATION*
CONTACT
sudeeptogadia@gmail.com

**ಮನೆ ಬಾಡಿಗೆಗೆ ಇದೆ**
ವಿದ್ಯಾನಗರ, 39ನೇ ವಾರ್ಡ್ 3ನೇ ಕ್ರಾಸ್ 1ನೇ ಮಹಡಿ ಸವಿತಾ ಕಾಮಧೇನು ಹೋಟೆಲ್ ಪಕ್ಕ, ದಾವಣಗೆರೆ.
9632689119, 8951668647

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician System Operating ಗಾಗಿ Lady Candidate ಬೇಕಾಗಿದ್ದಾರೆ. Salary + Incentives ಸಹ ನೀಡುತ್ತೇವೆ.
98805 31599

**HOUSE FOR RENT**
3/4 BHK, First floor, 4th main, MCC `A' Block, Near Puranthar Hospital.
94486 68265
94819 09522

**ಮನೆ ಬಾಡಿಗೆಗೆ ಇದೆ**
3 BHK Ground Floor, MCC 'A' Block, Davangere.
Ph : 99866 27173

**ಮನೆ ಮಾರಾಟಕ್ಕಿದೆ**
ಅಶೋಕ ನಗರ, ಯರಗುಂಟೆ ಕ್ರಾಸ್ ಗೋಡೌನ್ ಮುಂದೆ 3ನೇ ಕ್ರಾಸ್ ಕಬ್ಬಿಣದ ಏಣಿ, ವಾಸ್ತು ಪ್ರಕಾರ ಇದೆ. 30x40 ರಲ್ಲಿ ಎರಡು ಮನೆ, ದಾವಣಗೆರೆ.
ಫೋ. : 9632 689119

**WANTED**
We are hiring telecallers good communications skills, Required : (Only for Girls, Womens ) Salary : 6000,7000 ( Under Graduates) Salary : 8000, 9000, 10000 (Post Graduates) Contact :
95350 51589, 78670 75786
Office Location : Hasabhavi Circle, K.R. Market, Davanagere.

**ಮನೆ ಬಾಡಿಗೆಗೆ ಇದೆ**
ಮೊದಲ ಮಹಡಿ 2BHK ಮನೆ ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, 4ನೇ ಮೇನ್, 12ನೇ ಕ್ರಾಸ್, (ಸಸ್ಯಹಾರಿಗಳಿಗೆ ಮಾತ್ರ)
99640 28699

**ಮನೆ ಬಾಡಿಗೆಗೆ ಇದೆ**
ಸಾಯಿ ಬಾಬಾ ದೇವಸ್ಥಾನ ಹಿಂಭಾಗ ಎಂ.ಸಿ.ಸಿ. 'ಎ' ಬ್ಲಾಕ್ (ಪೂರ್ವ) 3BHK (ರೂ. 7500) (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ :
70196 18397

**ಸಹಾಯಕರು/Helper ಬೇಕಾಗಿದ್ದಾರೆ**
ಹುದ್ದೆಗಳ ಸಂಖ್ಯೆ -02
1)Helper women (ಸಹಾಯಕ ಮಹಿಳೆ ): 01
2) Helper boy (ಸಹಾಯಕ ಹುಡುಗ-18ರಿಂದ 25 ವರ್ಷ ): 01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ,
'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
87927 02690, 99862 26454, 98444 43374

**ಮನೆ ಬಾಡಿಗೆಗೆ ಇದೆ**
1ನೇ ಮಹಡಿಯಲ್ಲಿ 2 ಬೆಡ್ ರೂಂ ಇರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ : ಚಿಕ್ಕಮ್ಮಣ್ಣಿ ದೇವರಾಜ ಅರಸ್ ಬಡಾವಣೆ, 3ನೇ ಮೇನ್, ದಾವಣಗೆರೆ.
ಫೋ : 94486 66687, 75794 44657, 77958 88764

**ಬೇಕಾಗಿದ್ದಾರೆ**
3 ವರ್ಷ GST, IT & TALLY ಅನುಭವವಿರುವ (ಬಿಕಾಂ) ಅಕೌಂಟೆಂಟ್ ಹುದ್ದೆ ಖಾಲಿ ಇದೆ. ಆಸಕ್ತರು ಸಂಪರ್ಕಿಸಿ :
94481 32721

**ಮಳಿಗೆ ಬಾಡಿಗೆಗೆ ಇದೆ**
15x15 Sq.Ft ಅಳತೆಯ ಕಾರ್ನರ್ ಮಳಿಗೆ ಬಾಡಿಗೆಗೆ ಇದೆ, ರಾಮ್ ಅಂಡ್ ಕೋ ಸರ್ಕಲ್ ಹತ್ತಿರ 4ನೇ ಮುಖ್ಯ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ:
9964932504

**2 BHK HOUSE FOR RENT/LEASE**
Near Podar International in J.H. Patel Badavane, Davangere.
95359 99218, 88617 11072

**ಹುಡುಗರು ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಗಮೇಶ್ವರ ಪ್ರಾವಿಜನ್ ಸ್ಟೋರ್ಸ್, ಭಗತ್‌ಸಿಂಗ್ ನಗರ, ದಾವಣಗೆರೆ.
83173 43604, 87489 10050

**ಜಮೀನು ಮಾರಾಟಕ್ಕಿದೆ**
ಶಾಮನೂರಿನಿಂದ ಮಲೇಬೆನ್ನೂರಿಗೆ ಹೋಗುವ ರಸ್ತೆಯಲ್ಲಿ ಬೂದಿಹಾಳ್ ಹತ್ತಿರ 3 ಎಕರೆ 23 ಗುಂಟೆ ಬೋರ್‌ವೆಲ್ ನೀರಿನ ಸೌಕರ್ಯವಿರುವ ನೀರಾವರಿ ಜಮೀನು ಮಾರಾಟಕ್ಕಿದೆ.
99454 61501, 76196 37007

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ 4ನೇ ವಾರ್ಡಿನ, ಭಾರತ್ ಕಾಲೋನಿಯ, 8ನೇ ಕ್ರಾಸ್‌ನಲ್ಲಿರುವ (ಡೋ.ನ. 1384. 1383/1) 30x40 ಅಳತೆಯ 3 ಅಂತಸ್ತಿನ ಒಟ್ಟು 12 ಮನೆಗಳಿರುವ ಅಪಾರ್ಟ್‌ಮೆಂಟ್ ಮಾರಾಟಕ್ಕಿದೆ. ಸಂಪರ್ಕಿಸಿ : (ಕರಿಗಾರ ನೀಲಪ್ಪ)
63608 12253, 63618 68776

**ಮನೆ ಲೀಸ್/ಬಾಡಿಗೆಗೆ ಇದೆ**
ಕುವೆಂಪು ನಗರ ಬಾಪೂಜಿ ಸ್ಕೂಲ್ ಹತ್ತಿರ 6ನೇ ಕ್ರಾಸ್‌ನಲ್ಲಿ ದಕ್ಷಿಣ ದಿಕ್ಕಿನ 2ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ, ಬೋರ್‌ವೆಲ್ / ಮುನ್ಸಿಪಲ್ ನೀರಿನ ಸೌಕರ್ಯವಿದೆ.
99642 22777

**SITE FOR IMMEDIATE SALE**
@ JH PATEL BADAVANE
Total area = 1509 square feet
Less than market price
Contact number :
79966 67866
88849 97589

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
81478 03755

**HOUSE FOR RENT**
P.J Extension , 4th Main road , House for Rent, First floor , 2 bhk, East facing , Vaastu , Near Ram & co circle. Call :
70196 73972

**ಗ್ಯಾಸ್ ಗೀಸರ್ ರಿಪೇರಿ**
ನಮ್ಮಲ್ಲಿ ಎಲ್ಲಾ ರೀತಿಯ ಗ್ಯಾಸ್ ಗೀಸರ್‌ಗಳ ರಿಪೇರಿ ಹಾಗೂ ಮಾರಾಟ ಮಾಡಲಾಗುತ್ತದೆ.
ರತ್ನ ಮಾರ್ಕೆಟಿಂಗ್
99019 40727

**ಮನೆ ಮಾರಾಟಕ್ಕೆ/ಲೀಸ್/ ಬಾಡಿಗೆಗೆ ಇದೆ**
ರಂಗನಾಥ ಬಡಾವಣೆ, 7ನೇ ಕ್ರಾಸ್‌ನಲ್ಲಿ 50x30 ರ ನೆಲಮಹಡಿಯಲ್ಲಿ 2BHK, ಮೊದಲನೇ ಮಹಡಿಯಲ್ಲಿ 2 ಬೆಡ್ ರೂಂನ ಮನೆ ವಾಸ್ತು ಪ್ರಕಾರವಿದ್ದು ಉತ್ತರ ಪೂರ್ವ ದಿಕ್ಕಿನದಾಗಿದ್ದು, ಬೋರ್‌ವೆಲ್ ಮುನ್ಸಿಪಲ್ ಸೌಕರ್ಯ ಇದೆ.
99642 22777

**ಮನೆ ಬಾಡಿಗೆಗೆ ಇದೆ**
Ground Floor 2BHK ಮನೆ ಅಟ್ಯಾಚ್ ಬಾತ್ ರೂಮ್, ಮುನ್ಸಿಪಲ್ ಹಾಗೂ ಬೋರ್ ವೆಲ್ ಸೌಕರ್ಯ ಇದೆ, ಪೂರ್ವ ದಿಕ್ಕಿನ ಮನೆ, ಡೋ.ನಂ. 2345/49, ಲೆನಿನ್ ನಗರದ HKR ಸರ್ಕಲ್, SVS ಕಾನ್ವೆಂಟ್ ಮುಂಭಾಗ ಸಂಪರ್ಕಿಸಿ :
99641 10464

**ಸೈಟ್ ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆಯಲ್ಲಿ ಬರತಕ್ಕ ಸೈಟ್ ನಂ. 746 ರ ಪೂರ್ವ -ಉತ್ತರಾಭಿಮುಖದಲ್ಲಿರುವ 15x30 ರ ಅಡಿ ಕಾರ್ನರ್ ಸೈಟ್ 60 ಅಡಿ ರಸ್ತೆಯ ಕಮರ್ಷಿಯಲ್ ಉಪಯೋಗಕ್ಕೆ ಬರುವ ಸೈಟ್ ಮಾರಾಟಕ್ಕಿದೆ. ದರ : 7200/- ವಿಳಾಸ : 1ನೇ ಮೇನ್, 7ನೇ ಕ್ರಾಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
94482 48242, 78927 53714

**ಬೇಕಾಗಿದ್ದಾರೆ**
ಅಡುಗೆ ಮಾಡಲು ಲಿಂಗಾಯತ ಮಹಿಳೆ ಬೇಕಾಗಿದ್ದಾರೆ. ಆಕರ್ಷಕ ವೇತನ ಕೊಡಲಾಗುವುದು.
70221 03376

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕಂಪ್ಯೂಟರ್ ರಿಪೇರಿ ಮಾಡಲು ಬರುವ ಯುವಕರು ಬೇಕಾಗಿದ್ದಾರೆ. ಸಂಬಳ : 7000-8000 ರೂ.
ಮೊ: 99027 65365

**ಸೈಟ್ & ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ**
ಬನಶಂಕರಿಯಲ್ಲಿ (ಹಳೆ) ಪೂರ್ವಕ್ಕೆ 40x62 ಸೈಟ್ ಇದೆ ಮಾರಾಟಕ್ಕೆ, ಸರ್ಕಾರಿ ನೌಕರರ ಬಡಾವಣೆಯಲ್ಲಿ 'ಬಿ' ಬ್ಲಾಕ್ 30x50 ಪೂರ್ವ 30x40 ಪೂರ್ವ ಸೈಟ್ ಮಾರಾಟಕ್ಕೆ ಇದೆ. ಬೈಪಾಸ್ ಸರ್ವೀಸ್ ರಸ್ತೆಗೆ 30x55 ಕಮರ್ಷಿಯಲ್ ಸೈಟ್ ಇದೆ, ಮಾರಾಟಕ್ಕೆ ಇದೆ, ಶ್ರೀ ಸಾಮಾನ್ಯದಲ್ಲಿ 30x43 ಉತ್ತರಕ್ಕೆ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ , ಸುರೇಶ್ ಶಾಮನೂರು :
84314 00907

**ಜನರೇಟರ್ ಮಾರಾಟಕ್ಕಿದೆ**
ಸುಸಜ್ಜಿತವಾದ KOEL-I Green 25 KVA ಜನರೇಟರ್ ಮಾರಾಟಕ್ಕಿದೆ. Model-KG1-25WSE/25KVA-2019 ಸಂಪರ್ಕಿಸಬೇಕಾದ ಮೊಬೈಲ್ ನಂ.
80732 58573

**ನರ್ಸಿಂಗ್ ಸಿಬ್ಬಂದಿ ಬೇಕಾಗಿದ್ದಾರೆ**
ಮಲೇಬೆನ್ನೂರಿನ ಆಸ್ಪತ್ರೆಯಲ್ಲಿ ನರ್ಸಿಂಗ್ (ನರ್ಸಿಂಗ್ ಪಾಸ್/ಫೇಲ್, ಲ್ಯಾಬ್ ಟೆಕ್ನೀಷಿಯನ್ ಪಾಸ್/ಫೇಲ್, ಪಿಯುಸಿ ಪಾಸ್/ಫೇಲ್, ಡಿಗ್ರಿ ಪಾಸ್/ಫೇಲ್) ಮತ್ತು ಆಯಾ (ಡಿ ಗ್ರೂಪ್) ಕೆಲಸ ನಿರ್ವಹಿಸಲು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ, ಉಳಿದುಕೊಳ್ಳಲು ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.
ಮೊ : 99163 99692

**House For Rent**
3 BHK House for Rent in 1st Floor, # 2581/15, 4th Main, MCC A Block, Church Road, Davanagere. (Behind Madiwala Machayya Kalyana Mantap)
94483 39242

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಅಧಿಕೃತ ಚೀಟಿ ಸಂಸ್ಥೆ**
ರೂ. 1 ಲಕ್ಷದ ಚೀಟಿ ಪ್ರಾರಂಭ 50 ಸದಸ್ಯರು, 1,400 ರಿಂದ 2,000 ರೂ.ವರೆಗೆ. ಸಂಪರ್ಕಿಸಿ
ಸ್ಕಂದ ಚಿಟ್ ಫಂಡ್ಸ್ (ರಿ.)
78997 75159

**WANTED**
We are Hiring Cashiers and waiters for restaurant experienced / freshers (only for females)
99722 62275

**SECURITY GUARD ಬೇಕಾಗಿದ್ದಾರೆ**
ಉತ್ತಮ ವೇತನ,
70012 87756, 97409 77785

**ಶ್ರೀ ಧರ್ಮಸ್ಥಳ ಮಂಜುನಾಥ ಸ್ವಾಮಿ ದೈವಶಕ್ತಿ ಜ್ಯೋತಿಷ್ಯರು**
(ಪಂಡಿತ್ ಮಂಜುನಾಥ ಭಟ್)
ನಂ.1. ವಶೀಕರಣ ಸ್ಪೆಷಲಿಸ್ಟ್
ಸಮಸ್ಯೆ : ವಿದ್ಯೆ, ಉದ್ಯೋಗ, ಆರೋಗ್ಯ, ಹಣಕಾಸು, ಸಾಲಬಾಧೆ, ಮಾಟ ಮಂತ್ರ ವಿ.ಸೂ.: ಸ್ತ್ರೀ-ಪುರುಷ ವಶೀಕರಣಕ್ಕೆ ಕೇವಲ 3 ದಿನಗಳಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಯಾವುದೇ ಸಮಸ್ಯೆಯಿದ್ದರೂ ಫೋನಿನ ಮೂಲಕ ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಳ್ಳಿ.
ಫೋ.: 9902324487

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084


**Commercial Building Available for Rent**
Ground floor 1000 Sq.ft First Floor 1700 Sq.ft, Second Floor 1700 Sq.ft with lift and Generator Chetana Hotel Road.
94480 56468

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ವಾಟರ್ ಪ್ರೂಫಿಂಗ್ (ನೀರಿನ ಲೀಕೇಜ್)**
ನಿಮ್ಮ ಮನೆಯ ಅಥವಾ ಕಟ್ಟಡಗಳ, ಮಹಡಿ, ಮೆಟ್ಟಿಲುಗಳು, ಬಾತ್ ರೂಂ, ಟೆರೇಸ್, ಸಂಪು, O.H ಟ್ಯಾಂಕ್, ಗೋಡೆಯ ಬಿರುಕು, ಕೀಟುಗಳ ಬಿರುಕು, ಕಿಟಕಿ, ಸಜ್ಜಾ, ಈಜುಕೊಳ, ಇತ್ಯಾದಿ ಯಾವುದೇ ರೀತಿಯ ನೀರಿನ ಲೀಕೇಜ್ ಆಗುತ್ತಿದ್ದರೆ, ನಮ್ಮನ್ನು ತಕ್ಷಣವೇ ಸಂಪರ್ಕಿಸಿ :
80955 09025
ಕೆಲಸ 100% ಗ್ಯಾರಂಟಿಯಿದೆ.

# ದಲಿತರಿಗೆ ಅಕ್ಷರಾಭ್ಯಾಸ ಶರಣರ ಕ್ರಾಂತಿ

## ಜಾಗತಿಕವಾಗಿ ಯಾವ ಭಾಷೆಯಲ್ಲೂ ಈ ಕ್ರಾಂತಿ ಆಗಿಲ್ಲ : ಮನು ಬಳಿಗಾರ್



ದಾವಣಗೆರೆ, ಆ. 26 - ದಲಿತರು ಹಾಗೂ ಹಿಂದುಳಿದವರಿಗೆ ಅಕ್ಷರಾಭ್ಯಾಸ ಮಾಡಿಸಿದ್ದಷ್ಟೇ ಅಲ್ಲದೇ, ಅವರಿಂದ ಸಾಹಿತ್ಯ ನಿರ್ಮಿಸಿದ ಕ್ರಾಂತಿ ಕನ್ನಡ ಹೊರತು ಪಡಿಸಿದರೆ ವಿಶ್ವದ ಯಾವ ಭಾಷೆಯಲ್ಲೂ ಆಗಿಲ್ಲ ಎಂದು ಕ.ಸಾ.ಪ. ಮಾಜಿ ಅಧ್ಯಕ್ಷ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ್ ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ವತಿಯಿಂದ ನೀಡಲಾಗುವ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು. ನಗರದ ಕುವೆಂಪು ಕನ್ನಡ ಭವನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ದೇಶದ ಬಹುತೇಕರು ಅನಕ್ಷರಸ್ಥರಾಗಿದ್ದರು. ಹೀಗಿರುವ ಸಂದರ್ಭದಲ್ಲಿ 12ನೇ ಶತಮಾನದಲ್ಲೇ ದಲಿತರು ಹಾಗೂ ಹಿಂದುಳಿದವರಿಗೆ ಶರಣರು ಅಕ್ಷರಾಭ್ಯಾಸ ಮಾಡಿಸಿದ್ದು, ಜಾಗತಿಕವಾಗಿ ಬೇರೆ ಎಲ್ಲೂ ಆಗದ ಕ್ರಾಂತಿ ಎಂದವರು ಹೇಳಿದರು.

ಜಗತ್ತಿನಲ್ಲಿಯೇ ಅಪರೂಪವಾಗಿರುವ ಶರಣ ಕ್ರಾಂತಿಯಿಂದ 12ನೇ ಶತಮಾನದಲ್ಲಿ ಮಾನವೀಯ ಅಂಶಗಳು ಬೆಳೆದವು. ಕಾಯಕ, ದಾಸೋಹ ಹಾಗೂ ಅಪರಿಗ್ರಹಗಳು ಮಾನವೀಯತೆಯ ಪ್ರತೀಕವಾಗಿವೆ ಎಂದು ತಿಳಿಸಿದರು.

ಕಾಯಕವು ತನು ಹಾಗೂ ಮನಗಳಿಂದ ಸಮರ್ಪಿತವಾಗಿರಬೇಕು. ಈ ರೀತಿಯ ಕಾಯಕದಿಂದ ಬಡವರಿಗೆ ಹಾಗೂ ನೋವುಂಡವರಿಗೆ ನೆರವಾಗಬೇಕು ಎಂಬುದು ಶರಣರ ತತ್ವವಾಗಿತ್ತು. ಆ ತತ್ವವನ್ನು ಮಾಗನೂರು ಬಸಪ್ಪ ಪಾಲಿಸಿದ್ದರು ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಜಿಲ್ಲಾ ಕ.ಸಾ.ಪ. ಮಾಜಿ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ, ಮಾಗನೂರು ಬಸಪ್ಪನವರು ಕಾಯಕ, ಕಾಸು ಹಾಗೂ ಕಾಲಕ್ಕೆ ಅತಿ ಹೆಚ್ಚಿನ ಮಹತ್ವ ನೀಡಿದ್ದರು. ತಮ್ಮ ಕುಟುಂಬಕ್ಕೆ ಸೀಮಿತವಾಗದೇ ಸಮಾಜಕ್ಕೆ ಶ್ರಮಿಸಿದರು. ಶಿಕ್ಷಣ, ವ್ಯಾಪಾರ, ಧಾರ್ಮಿಕ ಸೇರಿದಂತೆ ಹಲವು ವಲಯಗಳಲ್ಲಿ ಕೊಡುಗೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವೆ ಹಾಗೂ ಸಾಹಿತಿ ಬಿ.ಟಿ. ಲಲಿತಾ ನಾಯ್ಕ್ ಅವರಿಗೆ ಆರೂಢ ದಾಸೋಹಿ ಶರಣ ಮಾಗನೂರು ಬಸಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕ.ಸಾ.ಪ. ಜಿಲ್ಲಾ ಅಧ್ಯಕ್ಷ ಬಿ. ವಾಮದೇವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಗನೂರು ಬಸಪ್ಪ ಪ್ರತಿಷ್ಠಾನದ ಅಧ್ಯಕ್ಷ ಎಂ.ಜಿ. ಸಂಗಮೇಶ್ವರ ಗೌಡ್ರು ಅಧ್ಯಕ್ಷತೆ ವಹಿಸಿದ್ದರು.

ಚಿಕ್ಕಮಗಳೂರಿನ ಬಸವ ತತ್ವ ಪೀಠದ ಶ್ರೀ ಬಸವ ಮರುಳಸಿದ್ದ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು.

ವೇದಿಕೆಯ ಮೇಲೆ ಸುನಂದದೇವಿ ಸಂಗಮೇಶ್ವರ ಗೌಡ್ರು, ಕ.ಸಾ.ಪ. ಗೌರವ ಕಾರ್ಯದರ್ಶಿ ಬಿ. ದಿಳ್ಳೆಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಬಿ. ಕಲಪನಹಳ್ಳಿಯಲ್ಲಿ ಇಂದು ವಚನಾಭಿಷೇಕ

ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಇಂದು ಬೆಳಿಗ್ಗೆ 5.30 ಕ್ಕೆ ಮಹಾತ್ಮ ಶರಣ ಬಸವೇಶ್ವರರ ಶ್ರಾವಣ ಮಾಸದ ವಚನಾಭಿಷೇಕ ಹಾಗೂ ಪೂಜಾ ಮಹೋತ್ಸವ ಜರುಗಲಿದೆ. ನಂತರ ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ ನೆರವೇರಲಿದೆ.

# ಅಂಗನವಾಡಿ ಕೇಂದ್ರಗಳು ಸರ್ಕಾರ - ಸಮಾಜದ ಕೊಂಡಿ



ದಾವಣಗೆರೆ, ಆ.26- ಸರ್ಕಾರ ಮತ್ತು ಸಮಾಜದ ಕೊಂಡಿಯಾಗಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕೆಲಸ ಮಾಡುತ್ತಿದ್ದಾರೆ ಎಂದು ಹೊಸತು ಪತ್ರಿಕೆ ಸಂಪಾದಕರೂ, ರಾಜ್ಯ ಕಾರ್ಮಿಕ ಮುಖಂಡರೂ ಆದ ಡಾ. ಸಿದ್ದನಗೌಡ ಪಾಟೀಲ್ ಹೇಳಿದರು.

ನಗರದ ಶ್ರೀ ಶಿವಯೋಗಾಶ್ರಮದ ಆವರಣದಲ್ಲಿ ದಾವಣಗೆರೆ ಜಿಲ್ಲಾ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ವತಿಯಿಂದ ಇಂದು ಹಮ್ಮಿಕೊಂಡಿದ್ದ 6 ನೇ ಜಿಲ್ಲಾ ಸಮ್ಮೇಳನವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿರುವ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣಗೊಳಿಸುವ ಹುನ್ನಾರವನ್ನು ವಿರೋಧಿಸಿ, ಸಂಘಟಿತ ಹೋರಾಟ ಮಾಡಿದ್ದರಿಂದಲೇ ಅಂಗನವಾಡಿಕೇಂದ್ರಗಳನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸುವಲ್ಲಿ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಎಂದು ದೂರಿದರು.

ಯೂನಿಸೆಫ್ ನಿರ್ದೇಶನದ ಮೇರೆಗೆ ಕರ್ನಾಟಕ ರಾಜ್ಯದಲ್ಲಿ 1975 ರಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಪ್ರಾಯೋಗಿಕವಾಗಿ ಆಯ್ದ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು. ಇದೀಗ ಇಡೀ ರಾಜ್ಯದ ಎಲ್ಲಾ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ ಎಂದರು.

ರಾಜ್ಯದಲ್ಲಿ 1.40 ಲಕ್ಷ ಜನ ಎಲ್ಲಾ ಜಿಲ್ಲೆ, ತಾಲ್ಲೂಕು, ಗ್ರಾಮೀಣ ಪ್ರದೇಶದಲ್ಲಿ ಹಾಗೂ ದೇಶದಲ್ಲಿ 10 ಲಕ್ಷಕ್ಕೂ ಅಧಿಕ ಮಹಿಳೆಯರು ಐಸಿಡಿಎಸ್ ಯೋಜನೆಯಡಿ ಕೆಲಸ ಮಾಡುತ್ತಿದ್ದಾರೆ.

ಈ ಹಿಂದೆ ಕೇವಲ ಶಿಕ್ಷಣ ಕ್ಷೇತ್ರ ಸೇರಿದಂತೆ ಕೇವಲ ಬೆರಳೆಣಿಕೆಯಷ್ಟು ಕ್ಷೇತ್ರಗಳಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದರು. ಆದರೆ ಇದೀಗ ಎಲ್ಲಾ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆಂದರು.

ಅಂಗನವಾಡಿ ಉದ್ಯೋಗಿಗಳಿಗೆ ವೇತನ ಹೆಚ್ಚಳ ಮಾಡಿರುವುದು ಯಾವುದೇ ಸರ್ಕಾರದ ದೇಣಿಗೆ ಅಥವಾ ಕಾಣಿಕೆಯಲ್ಲ. ಸಂಘಟಿತ ಹೋರಾಟದ ಫಲದಿಂದ ಗೌರವಧನ ಹೆಚ್ಚಳವಾಗಲು ಸಾಧ್ಯವಾಗಿದೆ ಎಂದು ಹೇಳಿದರು.

ಗರ್ಭಿಣಿಯರ ಸಾವಿನ ಸಂಖ್ಯೆ, ನವಜಾತ ಶಿಶುವಿನ ಸಂಖ್ಯೆ, ಪೋಲಿಯೋದಿಂದ ಸಾವನ್ನಪ್ಪಿರುವವರ ಸಂಖ್ಯೆ ಕಡಿಮೆಯಾಗಲು ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಪ್ರಾಮಾಣಿಕ ಸೇವೆ ಕಾರಣ ಎಂದರು.

ಅಪೌಷ್ಠಿಕತೆ ನಿವಾರಣೆ ಮಾಡುವ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಪಾತ್ರ ಮಹತ್ತರವಾದುದು. ಆದರೆ ಶ್ರಮಕ್ಕೆ ಪ್ರತಿಫಲ ಸಿಗಬೇಕಾಗಿದೆ ಎಂದು ಹೇಳಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಸಾಮಾಜಿಕ ಭದ್ರತೆ ಬೇಕಾಗಿದೆ. ಕಾರ್ಮಿಕ ಕಾಯ್ದೆ ಅನ್ವಯ ಪ್ರತಿ ವರ್ಷ ವೇತನ ಪರಿಷ್ಕರಣೆ ಆಗಬೇಕೆಂಬ ಕಾನೂನಿದ್ದರೂ ಸಮರ್ಪಕವಾಗಿ ಜಾರಿಯಾಗುತ್ತಿಲ್ಲ. ಈ ಬಗ್ಗೆ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಗಮನ ಸೆಳೆಯುವುದಾಗಿ ತಿಳಿಸಿದರು.

ರಾಜ್ಯದಲ್ಲಿ ಯಾರೂ ಕೂಡ ಹಸಿವಿನಿಂದ ಸಾಯಬಾರದು ಎನ್ನುವ ಕಾಳಜಿಯನ್ನಿಟ್ಟುಕೊಂಡು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದರು. ಆದರೆ ಕೇಂದ್ರ ಸರ್ಕಾರ ಅಕ್ಕಿ ಪೂರೈಸುವಲ್ಲಿ ರಾಜ್ಯಕ್ಕೆ ಅನ್ಯಾಯ ಮಾಡಿದ್ದು, ಯಾವುದೇ ಕಾರಣಕ್ಕೂ 'ಅನ್ನ' ಕೊಡುವ ವಿಚಾರದಲ್ಲಿ ರಾಜಕೀಯ ಸಲ್ಲದು ಎಂದರು.

ಅಂಗನವಾಡಿ ಕಾರ್ಯಕರ್ತೆ ಯರ ಮತ್ತು ಸಹಾಯಕಿಯರ ಫೆಡರೇಷನ್ ಜಿಲ್ಲಾಧ್ಯಕ್ಷರಾದ ಎಂ.ಬಿ. ಶಾರದಮ್ಮ ಅಧ್ಯಕ್ಷತೆ ವಹಿಸಿದ್ದರು.

ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎಂ.ಎಸ್. ಅಭಿಕುಮಾರ್, ಫೆಡರೇಷನ್ ರಾಜ್ಯಾಧ್ಯಕ್ಷ ಅಮ್ಜದ್, ಪ್ರಧಾನ ಕಾರ್ಯದರ್ಶಿ ಎಂ. ಜಯ್ಯಮ್ಮ, ವಿಶ್ವಮಾನವ ಮಂಟಪ ಸಂಸ್ಥಾಪಕ ಆವರಗೆರೆ ರುದ್ರಮುನಿ, ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ಹೆಚ್.ಜಿ. ಉಮೇಶ್ ಆವರಗೆರೆ, ಚಂದ್ರು ಆವರಗೆರೆ, ವಾಸು ಆವರಗೆರೆ, ರಾಘವೇಂದ್ರ ನಾಯರಿ, ಮಹ್ಮದ್ ಬಾಷಾ, ವಿಶಾಲಾಕ್ಷಿ ಮೃತ್ಯುಂಜಯ, ಎಸ್.ಎಸ್. ಮಲ್ಲಮ್ಮ ಸುಶೀಲಮ್ಮ, ಚನ್ನಮ್ಮ, ವಿಮಲಾಕ್ಷಿ, ಕೆ.ಸಿ. ನಿರ್ಮಲ, ರೇಣುಕಮ್ಮ, ಸರ್ವಮ್ಮ, ಸುಧಮ್ಮ, ಭಾರತಿ, ಗಾಯತ್ರ ಮತ್ತಿತರರಿದ್ದರು.

**ರಾಜ್ಯ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದರಿಂದ ದೇಶ ದಿವಾಳಿಯತ್ತ ಸಾಗುತ್ತಿದೆ ಎನ್ನುವ ಕೇಂದ್ರ ಸರ್ಕಾರ, ಬಿಜೆಪಿ ಮುಖಂಡರಿಗೆ ಬಂಡವಾಳ ಶಾಹಿಗಳ 12 ಲಕ್ಷ ಕೋಟಿ ಸಾಲ ಮನ್ನಾ ಮಾಡುವುದರಿಂದ ದೇಶ ದಿವಾಳಿಯಾಗುವುದಿಲ್ಲವೇ ?**
**ದೇಶದಲ್ಲಿರುವ ಬ್ಯಾಂಕು, ಬಿಎಸ್ಸೆನ್ನೆಲ್ ಸೇರಿದಂತೆ ಅನೇಕ ಸರ್ಕಾರಿ ಸಂಸ್ಥೆಗಳನ್ನು ಖಾಸಗೀಕರಣ ಮಾಡಿ ಆದಾನಿ, ಅಂಬಾನಿಯಂತಹ ಬೃಹತ್ ಬಂಡವಾಳ ಶಾಹಿಗಳಿಗೆ ಮಾರಾಟ ಮಾಡಲಾಗಿದೆ.**
**- ಡಾ. ಸಿದ್ದನಗೌಡ ಪಾಟೀಲ್,** ಹಿರಿಯ ಕಾರ್ಮಿಕ ಮುಖಂಡರು

# ಹರಪನಹಳ್ಳಿ ತಾಲ್ಲೂಕು ಪದವೀಧರ ಕ್ಷೇತ್ರದ ಅಧ್ಯಕ್ಷರಾಗಿ ಬಸವರಾಜ್




ಹರಪನಹಳ್ಳಿ, ಆ.26- ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಹರಪನಹಳ್ಳಿ ವಿಧಾನಸಭಾ ಕ್ಷೇತ್ರದ ಪದವೀಧರ ಕ್ಷೇತ್ರದ ತಾಲ್ಲೂಕು ಅಧ್ಯಕ್ಷರನ್ನಾಗಿ ಬಸವರಾಜ್ ಹುಲಿಯಪ್ಪನವರ್ ಅವರನ್ನು ಜಿಲ್ಲಾಧ್ಯಕ್ಷ ಎಮ್. ರಮೇಶ್ ಅವರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ್ ಹೆಚ್. ಕೆ., ಉಪಾಧ್ಯಕ್ಷರಾಗಿ ತಿರುಮಲ ಕೋರಿಶೆಟ್ಟಿ ಮತ್ತು ಮೊಹಮದ್ ಭಾಷ ಹಾಗೂ ಸಂಘಟನಾ ಕಾರ್ಯದರ್ಶಿಯಾಗಿ ನಿರಂಜನಗೌಡ ಅವರನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸವರಾಜ್ ವೈ, ವಕೀಲರಾದ ಕಂಡ್ಯಪ್ಪ, ಮೋಹನ್, ಬಸವರಾಜ್, ಅರುಣ್, ಪ್ರಜ್ವಲ್, ನಾಗರಾಜ್, ಮಧು, ಅಣ್ಣಪ್ಪ ಜಿ. ಹಾಗೂ ಇತರೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹೊಸ ಕಡ್ಲೇಬಾಳ್‌ನಲ್ಲಿ ಇಂದು - ನಾಳೆ ಗಣಪತಿ ದೇವಸ್ಥಾನದ ಕಳಸರೋಹಣ



ದಾವಣಗೆರೆ ತಾಲ್ಲೂಕು ಹೊಸ ಕಡ್ಲೇಬಾಳು ಗ್ರಾಮದ ಶ್ರೀ ವರಸಿದ್ದಿ ವಿನಾಯಕ ಬಲಮುರಿ ಗಣಪತಿ ದೇವಸ್ಥಾನದ ಕಳಸವನ್ನು ಇಂದು ಸಂಜೆ 6 ಗಂಟೆಗೆ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತರುವುದು. ರಾತ್ರಿ 8 ರಿಂದ 12 ರವರೆಗೆ ಹೋಮ - ಹವನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ನಾಳೆ ದಿನಾಂಕ 28ರ ಸೋಮವಾರ ಬೆಳಿಗ್ಗೆ 10 ಗಂಟೆಗೆ ಗೋಪುರದ ಕಳಸಾರೋಹಣ ಕಾರ್ಯಕ್ರಮವನ್ನು ಹೆಬ್ಬಾಳು ಮಠದ ಶ್ರೀ ಮಹಾಂತ ರುದ್ರೇಶ್ವರ ಮಹಾಸ್ವಾಮೀಜಿಗಳ ಅಮೃತ ಹಸ್ತದಿಂದ ಕಳಸಾರೊಹಣ ಕಾರ್ಯಕ್ರಮ ನೆರವೇರಿಸಲಾಗುವುದು.

# ಹೊಳೆಸಿರಿಗೆರೆಯಲ್ಲಿ ಇಂದು ಗುರು ವಂದನೆ

ಹೊಳೆಸಿರಿಗೆರೆ ಗ್ರಾಮದ ಶ್ರೀ ಮಾಗೋಡ್ರ ಹಾಲಪ್ಪ ಪ್ರೌಢಶಾಲೆಯ 1981-82ನೇ ಸಾಲಿನಿಂದ 1987-88ನೇ ಸಾಲಿನ ವಿದ್ಯಾರ್ಥಿಗಳಿಂದ ಗುರುವಂದನೆ - ಗುರು ಸ್ಮರಣೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಕಲ್ಲೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ದಿವ್ಯ ಸಾನ್ನಿಧ್ಯ : ಸ್ವಾಮಿ ಶಾರದೇಶಾನಂದಜೀ ಮಹಾರಾಜ್, ಉದ್ಘಾಟನೆ : ಡಾ. ಮಂಜುನಾಥ ಕುರ್ಕಿ, ಅಧ್ಯಕ್ಷತೆ : ಮಾಗೋಡ್ರ ಓಂಕಾರಪ್ಪ, ಮುಖ್ಯ ಅತಿಥಿಗಳು : ಎನ್. ಹುಚ್ಚಪ್ಪ ಮಾಸ್ತರ್, ಉಪನ್ಯಾಸ : ಎಂ.ಬಿ. ತೇಜಸ್ವಿನಿ

# ಮಡಿವಾಳ ಸಮಾಜದ ಸಂಘಟನೆಗಾಗಿ ಜಾಗೃತಿ ಅಗತ್ಯ



ಜಗಳೂರು : 'ಮನ, ಮನೆಗೆ ಮಾಚಿದೇವ' ಕಾರ್ಯಕ್ರಮದಲ್ಲಿ ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಸ್ವಾಮೀಜಿ

ಜಗಳೂರು, ಆ.26- ನಿತ್ಯ ಕಾಯಕದಲ್ಲಿ ತೊಡಗಿರುವ ಮಡಿವಾಳ ಸಮಾಜದ ಒಗ್ಗಟ್ಟಿನ ಸಂಘಟನೆಗಾಗಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಚಿತ್ರದುರ್ಗ ಮಡಿವಾಳ ಗುರುಪೀಠದ ಶ್ರೀ ಬಸವ ಮಾಚಿದೇವ ಮಹಾಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ವಾಲ್ಮೀಕಿ ಭವನದಲ್ಲಿ ಮಡಿವಾಳ ಸಮಾಜದಿಂದ ಶ್ರಾವಣ ಮಾಸದ ಅಂಗವಾಗಿ ಹಮ್ಮಿಕೊಂಡಿದ್ದ 'ಮನ, ಮನೆಗೆ ಮಾಚಿದೇವ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಆಶೀರ್ವಚನ ನೀಡಿದರು.

ಸಂವಿಧಾನ ಬದ್ದ ಹಕ್ಕುಗಳಿಗಾಗಿ, ಸರ್ವತೋಮುಖ ಅಭಿವೃದ್ಧಿಗಾಗಿ ತಳಸಮುದಾಯಗಳು ಸಂಘಟಿತರಾಗಬೇಕು. 12 ನೇ ಶತಮಾನದಲ್ಲಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಚನಕಾರರ ಮುಂಚೂಣಿ ನಾಯಕತ್ವ ವಹಿಸಿದ್ದ ಮಾಚಿದೇವರ ಜಾತ್ಯತೀತ ಭಾವನೆ ಹಾಗೂ ಆದರ್ಶ, ಸಂದೇಶಗಳು ಸಮಾಜಕ್ಕೆ ಪಸರಿಸಬೇಕು. ರಾಜ್ಯದಲ್ಲಿ ಹಮ್ಮಿಕೊಂಡಿರುವ ಮನ, ಮನೆಗೆ ಮಾಚಿದೇವ ಜನಜಾಗೃತಿ ಆಂದೋಲನದ ಯಶಸ್ವಿಗೆ ಸಮಾಜದ ಬಂಧುಗಳು ಪಕ್ಷಾತೀತವಾಗಿ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಆಧುನಿಕ ತಂತ್ರಜ್ಞಾನ ಯುಗದಲ್ಲಿಯೂ ಮಡಿವಾಳ ಸಮುದಾಯದವರು ಮೂಲ ವೃತ್ತಿ ಬಟ್ಟೆ ತೊಳೆದು, ಇಸ್ತ್ರಿ ಮಾಡುವ ಸೇವೆಯಲ್ಲಿ ತೊಡಗಿದ್ದಾರೆ. ಮಡಿವಾಳ ಸಮಾಜದವರು ಸನಾತನ ಸಂಸ್ಕೃತಿ,ಬಡತನದ ಕೂಪದಿಂದ ಹೊರಬಂದು ಉದ್ಯಮಿಗಳಾಗಬೇಕು ಎಂದು ಕಿವಿಮಾತು ಹೇಳಿದರು.

ಜಾತ್ರೆ ಹಬ್ಬಗಳ ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ಮಕ್ಕಳ ಶಿಕ್ಷಣಕ್ಕೆ ಒತ್ತುಕೊಡಿ. ಸಮಾಜದ ಬದಲಾವಣೆ ಶಿಕ್ಷಣದಿಂದ ಮಾತ್ರ ಸಾಧ್ಯ ಎಂದು ಸಲಹೆ ನೀಡಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಸಾಧು ಸತ್ಪುರುಷರ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿರುವೆ.ಕ್ಷೇತ್ರದ ಅಭಿವೃದ್ಧಿ ನನ್ನ ಗುರಿ. ಮಡಿವಾಳ ಸಮಾಜಕ್ಕೆ ಭವನ ನಿರ್ಮಾಣಕ್ಕೆ ಅನುದಾನ ಒದಗಿಸಿ, ಮಡಿವಾಳ ಸಮಾಜದ ಶ್ರೇಯೋಭಿವೃದ್ಧಿಗೆ ಬದ್ಧನಾಗಿರುವೆ.

ಬಸವಣ್ಣನವರ ಅನುಭವ ಮಂಟಪದ ಮಾದರಿಯಲ್ಲಿ ಎಲ್ಲಾ ಸಮುದಾಯಗಳ ವಿಶ್ವಾಸಗಳಿಸಿ ಉತ್ತಮ ಆಡಳಿತ ನಡೆಸುವೆ. ಪಕ್ಷಾತೀತವಾಗಿ ಸಹಕಾರ ನೀಡಬೇಕು ಎಂದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಮಡಿವಾಳ ಸಮಾಜದವರು ಒಗ್ಗಟ್ಟಾಗಬೇಕು. ನನ್ನ ಆಡಳಿತಾವಧಿಯಲ್ಲಿ ಮಡಿವಾಳ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ಒದಗಿಸಿರುವೆ. ಭವನ ನಿರ್ಮಾಣಕ್ಕೆ ಸಂಸದರ ಅನುದಾನದಡಿ 10 ಲಕ್ಷ ಕೊಡಿಸುವೆ. ವೈಯಕ್ತಿಕ ಧನ ಸಹಾಯ ಮಾಡುವೆ. ಶೀಘ್ರ ಅಡಿಪಾಯ ಹಾಕಬೇಕು ಎಂದು ಹೇಳಿದರು.

ಕೆಪಿಸಿಸಿ ಎಸ್ ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಪ.ಪಂ ಸದಸ್ಯೆ ಮಂಜಮ್ಮ ಮಾತನಾಡಿದರು.

ಸಮಾರಂಭದಲ್ಲಿ ಮಡಿವಾಳ ಸಮಾಜದ ತಾಲ್ಲೂಕು ಅಧ್ಯಕ್ಷ ಎಂ.ಸಿ.ರೇವಣಸಿದ್ದಪ್ಪ, ತಾಲ್ಲೂಕು ಕಾರ್ಯದರ್ಶಿ ಬಿ.ರಮೇಶ್, ನಿವೃತ್ತ ಯೋಧ ರಾಜಣ್ಣ, ರಶ್ಮಿ ಮಡಿವಾಳ, ಶಿಕ್ಷಕ ನಾಗೇಶ್, ಉಮೇಶ್, ಹರೀಶ್, ಸಮಾಜದ ಉಪಾಧ್ಯಕ್ಷ ಶಿಕ್ಷಕ ಎಂ.ಆರ್. ಹನುಮಂತಪ್ಪ, ಶಿವಕುಮಾರ್, ತಿಪ್ಪೇಸ್ವಾಮಿ, ರವಿಕುಮಾರ್, ಹನುಮಂತಪ್ಪ, ಪಲ್ಲಾಗಟ್ಟೆ ಶೇಖರಪ್ಪ ಮುಂತಾದವರು ಇದ್ದರು.

# ನಗರದಲ್ಲಿ ಇಂದು ವಚನ ನೃತ್ಯ ರೂಪಕ, ಗುರುವಂದನೆ



ಶ್ರೀ ಶಿವಕುಮಾರ ಕಲಾ ಸಂಘ ಸಾಣೇಹಳ್ಳಿ ಹಾಗೂ ಸಮಸ್ತ ಭಕ್ತವೃಂದ ಇವರ ಸಹಯೋಗದಲ್ಲಿ ಇಂದು ಸಂಜೆ 6 ಗಂಟೆಗೆ ಎಸ್.ಎಸ್. ಮಲ್ಲಿಕಾರ್ಜುನ ಸಾಂಸ್ಕೃತಿಕ ಕೇಂದ್ರದ ವತಿಯಿಂದ ಭಾರತದ ಪ್ರಥಮ ವಚನ ಸಂಸ್ಕೃತಿ ಅಭಿಯಾನ 'ನೀ ನಿಲ್ಲದೇ ಮತ್ತಾರೂ ಇಲ್ಲವಯ್ಯ' ಬಸವಣ್ಣನವರ ಆಯ್ದ 44 ವಚನಗಳ ಆಧಾರಿತ 'ವಚನ ನೃತ್ಯ ರೂಪಕ' ಪ್ರದರ್ಶನ ಹಾಗೂ ಗುರುವಂದನೆ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ದೇವೇಂದ್ರಪ್ಪ, ಉದ್ಯಮಿ ಎಸ್.ಎಸ್. ಗಣೇಶ್, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ರಂಗ ಸಂಘಟಕ ಶ್ರೀನಿವಾಸ ಜಿ. ಕಪ್ಪಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿ. ರವಿಚಂದ್ರ ಭಾಗವಹಿಸಲಿದ್ದಾರೆ.

# ಹಡಗಲಿ : ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಎ.ಸಿ. ಪ್ರಕಾಶ್ ರಾವ್ ವರ್ಗ



ಹೂವಿನಹಡಗಲಿ, ಆ. 26 - ಹಿಂದೂ ಧಾರ್ಮಿಕ ದತ್ತಿ ಇಲಾಖೆಯ (ಮುಜರಾಯಿ) ವಿಜಯನಗರ ಹಾಗೂ ಬಳ್ಳಾರಿ ಜಿಲ್ಲೆಗಳ ಸಹಾಯಕ ಆಯುಕ್ತರಾಗಿದ್ದ ಎಮ್. ಎಚ್. ಪ್ರಕಾಶ್ ರಾವ್ ಅವರನ್ನು ಸರ್ಕಾರ ಕಾರವಾರ ಜಿಲ್ಲೆಗೆ ವರ್ಗಾವಣೆ ಮಾಡಿದೆ. ಬಹು ದಿನಗಳಿಂದ ಮೈಲಾರ, ಕೊಟ್ಟೂರು, ಕುರುವತ್ತಿ, ಮೊದಲಗಟ್ಟೆ, ಹಂಪಿ, ಕುರುಗೋಡು, ಬಳ್ಳಾರಿ, ಉಚ್ಚಂಗಿದುರ್ಗದ ದೇವಸ್ಥಾನಗಳ ಕಾರ್ಯ ನಿರ್ವಹಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

# ನಗರದಲ್ಲಿ ಇಂದು ವರದಿಗಾರರ ಕೂಟದಿಂದ ಮಾಧ್ಯಮ ದಿನಾಚರಣೆ

ಜಿಲ್ಲಾ ವರದಿಗಾರರ ಕೂಟದ ವತಿಯಿಂದ ಮಾಧ್ಯಮ ದಿನಾಚರಣೆ, ಮಾಧ್ಯಮ ಪ್ರಶಸ್ತಿ ಪ್ರದಾನ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವು ಇಂದು ಬೆಳಿಗ್ಗೆ 11 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಮಾಧ್ಯಮ ಪ್ರಶಸ್ತಿ ಪ್ರದಾನ ಮಾಡುವರು.

ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ದಾವಣಗೆರೆ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂಹವನ ಅಧ್ಯಯನ ವಿಭಾಗದ ಅಧ್ಯಕ್ಷ ಡಾ. ಶಿವಕುಮಾರ ಕಣಸೋಗಿ ಅವರು ಡಿ.ವಿ. ಗುಂಡಪ್ಪನವರ ಭಾವಚಿತ್ರಕ್ಕೆ ಪುಷ್ಪ ನಮನ ಮಾಡುವರು. ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ. ಏಕಾಂತಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ ಭಾಗವಹಿಸಲಿದ್ದಾರೆ.

# ಗ್ರಾಮೀಣ ಮಹಿಳೆಯರಿಗೆ ವೃತ್ತಿ ತರಬೇತಿ

ದಾವಣಗೆರೆ, ಆ.26- ತೋಳಹುಣಸೆಯ ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಿಂದ ಜಿಲ್ಲೆಯ ಗ್ರಾಮೀಣ ಮಹಿಳೆಯರಿಗೆ ಮೊಬೈಲ್ ರಿಪೇರಿ, ಮೋಟರ್ ವೈಂಡಿಂಗ್, ಪೋಟೋ ಗ್ರಫಿ ಮತ್ತು ವಿಡಿಯೋಗ್ರಫಿ ತರಬೇತಿ ನೀಡಲಾಗುವುದು. ಆಸಕ್ತರು ಇದೇ ದಿನಾಂಕ 31ರೊಳಗಾಗಿ ಹೆಸರು ನೋಂದಾಯಿಸಬಹುದು. ವಿವರಕ್ಕೆ ಸಂಪರ್ಕಿಸಿ : 7975139332, 70199 80484, 9964111314, 9538395817, 9481877076.

# ರಾಣೇಬೆನ್ನೂರು ಜೈನ್ ಸಮಾಜದಿಂದ ಮಹಾಮೃತ್ಯುಂಜಯ ಜಪ

ರಾಣೇಬೆನ್ನೂರು, ಆ. 26- ಇಲ್ಲಿನ ಜೈನ್ ಸಮಾಜದ 9 ಮಹಿಳೆಯರು, ಮೂವರು ಪುರುಷರು ಸೇರಿದಂತೆ ಒಟ್ಟು 12 ಜನರು 30 ಉಪವಾಸಗಳನ್ನು ಮಾಡುವದರ ಮೂಲಕ ಮಹಾಮೃತ್ಯುಂಜಯ ಜಪ ಮಾಡಿದ್ದು. ಬೆಂಗಳೂರು, ದಾವಣಗೆರೆ, ಹುಬ್ಬಳ್ಳಿಯಂತಹ ಮಹಾನಗರಗಳಲ್ಲಿ ಸಾಧ್ಯವಾಗದ್ದನ್ನು ರಾಣೇಬೆನ್ನೂರು ಸಮಾಜ ಮಾಡುತ್ತಿರುವುದು ಅತ್ಯಂತ ಶ್ಲಾಘನೀಯವಾದುದು ಎಂದು ಜೈನ್ ಮುನಿ ಆಚಾರ್ಯ ಶ್ರೀ ಮಹೇಂದ್ರಸಾಗರ ಸುರೀಶ್ವರಜಿ ಅವರು ಅಭಿಪ್ರಾಯಿಸಿದರು.

ಶ್ರೀ ಗಳು ರಂಗನಾಥ ನಗರದಲ್ಲಿರುವ ದೇವಸ್ಥಾನದಲ್ಲಿ ಇಂದು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ನಡೆಯಲಿರುವ ಸಮಾರಂಭ ಕುರಿತು ವಿವರಿಸುತ್ತಿದ್ದರು.

ಎಲ್ಲ ಧರ್ಮಗಳು, ಎಲ್ಲ ಧರ್ಮ ಗುರುಗಳು ಶಾಂತಿ, ಸೌಹಾರ್ದತೆ, ನೆಮ್ಮದಿಯ ಬದುಕಿಗೆ ಮಾರ್ಗದರ್ಶಕರಾಗಿದ್ದಾರೆ, ಇಂತಹ ಜಪಗಳ ಧಾರ್ಮಿಕ ಕಾರ್ಯಕ್ರಮಗಳಿಂದ ಸಿಗಲಿರುವ ಪ್ರತಿಫಲ ಕೇವಲ ನಮ್ಮ ಉರು, ರಾಜ್ಯ, ದೇಶಕ್ಕೆ ಸೀಮಿತವಾಗಿರದೆ ಇಡೀ ವಿಶ್ವಕ್ಕೆ ದೊರಕಲಿದೆ ಎಂದು ಶ್ರೀ ಮಹೇಂದ್ರಸಾಗರ ಸುರೀಶ್ವರಜಿ ನುಡಿದರು.

ಚಾತುರ್ಮಾಸ ಅಂದರೆ ಭಕ್ತಿಯ ಶಹನಾಯಿ ನುಡಿಯುತ್ತದೆ.ಉದಾರತೆಯ ಮುತ್ತುಗಳು ಮಾರಲ್ಪಡುತ್ತವೆ. ಪಾವಿತ್ರ್ಯತೆಯ ತೋರಣ ಕಟ್ಟಲಾಗುತ್ತದೆ. ಸಂವೇದನೆಯ ಜ್ಯೋತಿ ಪ್ರಜ್ವಲಿಸುತ್ತದೆ ಎಂದು ಜೈನ್ ಸಮಾಜದವರ ಆಚರಣೆಯ ಈತಿಂಗಳ ಮಹತ್ವವನ್ನು ಮುನಿಗಳು ಅರ್ಥೈಸಿದರು.

12 ಜನ 30 ಉಪವಾಸ ಮಾಡಿದ್ದಾರೆ. ಕೆಲವರು 8, 15 ಹೀಗೆ ಉಪವಾಸ ಮಾಡಿದ್ದು ದಿನಾಂಕ 29 ಕ್ಕೆ ಮುಕ್ತಾಯಗೊಳ್ಳಲಿದೆ. ಅಂದು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಮೂಲಕ ಅವರನ್ನು ದೇವಸ್ಥಾನದಲ್ಲಿ ನಡೆಯುವ ಸಮಾರಂಭಕ್ಕೆ ಕರೆತರಲಾಗುವುದು ಎಂದು ಅವರು ಹೇಳಿದರು. ಉಪ ಸಭಾಪತಿ ರುದ್ರಪ್ಪ ಲಮಾಣಿ, ಶಾಸಕ ಪ್ರಕಾಶ ಕೋಳಿವಾಡ ಪಾಲ್ಗೊಳ್ಳುವರು ಎಂದು ಜೈನ್ ಸಂಘದ ಅಧ್ಯಕ್ಷ ಪ್ರಕಾಶ ಜೈನ್ ತಿಳಿಸಿದರು. ಮಹೇಂದ್ರಕುಮಾರ ಜೈನ್, ರಮೇಶ ಭಂಡಾರಿ, ಸುರೇಶ ಜೈನ್, ರಾಜೇಂದ್ರ ಜೈನ್ ಇದ್ದರು.

# ಅಪ್ರೆಂಟಿಸ್ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಆ. 26- ಹೆಚ್.ಎ.ಎಲ್. ವತಿಯಿಂದ ಐ.ಟಿ.ಐ. (ಫಿಟ್ಟರ್, ಟರ್ನರ್, ಮೆಷಿನಿಸ್ಟ್, ಎಲೆಕ್ಟ್ರೀಷಿಯನ್, ವೆಲ್ಡರ್, ಸಿ.ಒ.ಪಿ.ಎ, ಫೌಂಡ್ರಿಮನ್ ಮತ್ತು ಶೀಟ್ ಮೆಟಲ್ ವರ್ಕರ್) ತೇರ್ಗಡೆ ಹೊಂದಿದ ಅಭ್ಯರ್ಥಿಗಳಿಂದ ಅಪ್ರೆಂಟಿಸ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ನಾಡಿದ್ದು ದಿನಾಂಕ 28 ರೊಳಗೆ ಭರ್ತಿ ಮಾಡಿದ ಅರ್ಜಿಯನ್ನು ಕಚೇರಿಗೆ ಸಲ್ಲಿಸಬೇಕು.ಅಭ್ಯರ್ಥಿಗಳು www.apprenticeshipindia.org ವೆಬ್‌ಸೈಟ್‌ನಲ್ಲಿ ನೋಂದಾಯಿಸಿ, ಕಡ್ಡಾಯವಾಗಿ ನೋಂದಣಿ ಸಂಖ್ಯೆಯನ್ನು ತರಬೇಕು. ವಿವರಕ್ಕೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಜಿಲ್ಲಾ ಆಡಳಿತ ಭವನ ದೂರವಾಣಿ 7406323294 ಸಂಪರ್ಕಿಸಲು ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ಡಿ. ತಿಳಿಸಿದ್ದಾರೆ.


ಬೇಕಾಗಿದ್ದಾರೆ

'ಪಾಂಡವ' ಕನ್ನಡ ಪ್ರಾದೇಶಿಕ ದಿನ ಪತ್ರಿಕೆಯಲ್ಲಿ ಕಾರ್ಯ ನಿರ್ವಹಿಸಲು ಕನ್ನಡ DTP (Photo Shop, Coral Draw, Page Maker, In Desigh) ಯಲ್ಲಿ ಅನುಭವ ಹೊಂದಿರುವ ಹಾಗೂ ಪತ್ರಿಕಾ ಕಾರ್ಯಾಲಯದಲ್ಲಿ ಪುಟ ವಿನ್ಯಾಸಕರಾಗಿ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿ.ಸೂ: ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 2.00 ಗಂಟೆಯೊಳಗೆ ಕರೆ ಮಾಡಲು ಕೋರಲಾಗಿದೆ.
ಸಂಪರ್ಕಿಸಿ : ಮೊ: 97427 89207

ಬೇಕಾಗಿದ್ದಾರೆ

1) ಆಫೀಸ್ ಕೆಲಸಕ್ಕಾಗಿ - ಪದವೀಧರರು
2) ಉಪನ್ಯಾಸಕರು - ಎಂ.ಎಸ್ಸಿ, ನರ್ಸಿಂಗ್, ಬಯೋ ಕೆಮಿಸ್ಟ್ರಿ, ಮೈಕ್ರೋ ಬಯೋಲಜಿ, ಸಿಬಿಝಡ್, ಬಯೋಲಜಿ, ಕೆಮಿಸ್ಟ್ರಿ ಇತರೆ.
ಕಂಪ್ಯೂಟರ್ ಜ್ಞಾನ ಹೊಂದಿರಬೇಕು.
ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಂಪರ್ಕಿಸಿ :
86180 50497, 70195 86789

TO-LET

Brand New Commercial Space / Bare-shell office space at Prime Loaction - AVK College Road, 2nd Main, Adjacent to winners carrer Academy.
- Total Area : 10,750 Sq.ft
- Basement (Parking) : 1695 Sq.ft
- Ground Floor : 1695 Sq.ft • Second Floor : 1840 Sq.ft
- First Floor : 1840 Sq.ft • Third Floor : 1840 Sq.ft

Covered root top terrace : 1840 Sq.ft
AMENITIES INCLUDE :
Commerical Capacity Elevator In House Parking.
Contcat : 89707 95986


# ನಾನು ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿ

## ಯಾವ ಕಾರಣಕ್ಕೂ ಕಾಂಗ್ರೆಸ್ ಸೇರಲ್ಲ : ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಸ್ಪಷ್ಟನೆ



ಹೊನ್ನಾಳಿ, ಆ. 26- ನಾನು ಯಾವುದೇ ಕಾರಣಕ್ಕೂ ಕಾಂಗ್ರೆಸ್ ಸೇರುವುದಿಲ್ಲ, ನನ್ನನ್ನು ಅವರು ಕರೆದೂ ಇಲ್ಲ ನಾನು ಹೋಗುತ್ತೇನೆ ಎಂದು ಎಲ್ಲಿಯೂ ಹೇಳಿಲ್ಲ ಎಂದು ಮಾಜಿ ಶಾಸಕ ಎಂ. ಪಿ. ರೇಣುಕಾಚಾರ್ಯ ಹೇಳಿದ್ದಾರೆ.

ಪಟ್ಟಣದಲ್ಲಿ ಅವರು ಮಾಧ್ಯಮದವರೊಂದಿಗೆ ಮಾತನಾಡಿ, ರೇಣುಕಾಚಾರ್ಯ ಅವರು ಕಾಂಗ್ರೆಸ್ ಪಕ್ಷ ಸೇರುತ್ತಾರೆ ಎಂಬ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಹೊನ್ನಾಳಿ - ನ್ಯಾಮತಿ ಅವಳಿ ತಾಲೂಕನ್ನು ಬರ ಪಟ್ಟಿಗೆ ಸೇರಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿದ್ದೇನೆ. ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ, ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದ್ದೇನೆ. ಅದೇ ರೀತಿಯಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರನ್ನು ಭೇಟಿ ಮಾಡಿದ್ದೇನೆ.

ಈ ನಾಯಕರ ಭೇಟಿ ಉದ್ದೇಶ ಹೊನ್ನಾಳಿ-ನ್ಯಾಮತಿ ಅವಳಿ ತಾಲ್ಲೂಕನ್ನು ಬರಪೀಡಿತ ಎಂದು ಘೋಷಣೆ ಮಾಡುವಂತೆ ಒತ್ತಾಯಿಸಲೆಂದೇ ಹೊರತು, ಬೇರೆ ಯಾವ ವಿಚಾರವನ್ನೂ ಚರ್ಚಿಸಿಲ್ಲ. ನಾನು ಕಾಂಗ್ರೆಸ್ ಸೇರಲ್ಲ, ಈ ಬಗ್ಗೆ ಆಸಕ್ತಿಯೂ ಇಲ್ಲ ಎಂದು ಹೇಳಿದರು.

ಮುಂಬರುವ ದಾವಣಗೆರೆ ಲೋಕಸಭಾ ಕ್ಷೇತ್ರದ ಬಿಜೆಪಿಯ ಪ್ರಬಲ ಆಕ್ಷಾಂಕ್ಷಿ ಎಂದು ನಾನು ಹೇಳಿದ್ದೇನೆ. ನನಗೆ ಲೋಕಸಭೆಗೆ ಟಿಕೆಟ್ ಸಿಗುತ್ತದೆ ಎಂಬ ವಿಶ್ವಾಸ ಇದೆ. ಹಲವು ವರ್ಷಗಳಿಂದ ಬಿಜೆಪಿಯಲ್ಲಿ ದುಡಿದಿದ್ದೇನೆ. ಶಾಸಕನಾಗಿ, ಸಚಿವನಾಗಿ ಕೆಲಸ ಮಾಡಿದ ಅನುಭವವಿದೆ. ವಿಶ್ವ ಮೆಚ್ಚಿದ ನಾಯಕ ಪ್ರಧಾನಿ ನರೇಂದ್ರ ಮೋದಿ ಅವರ 9 ವರ್ಷಗಳ ಕ್ರಾಂತಿಕಾರಕ ಅಭಿವೃದ್ಧಿ ಕಾರ್ಯಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಬೇರೆಯವರಿಗೆ ಬಿಜೆಪಿ ಟಿಕೆಟ್ ಕೊಟ್ಟರೂ ಗೆಲುವಿಗೆ ಶ್ರಮಿಸುತ್ತೇನೆ ಎಂದು ಎಂ. ಪಿ. ರೇಣುಕಾಚಾರ್ಯ ಹೇಳಿದರು.

